# ಅನಂತಪಥ

ANANTHKUMAR PRATISHTHANA

ಮಾನವತಾವಾದಿ, ಶಿಕ್ಷಣತಜ್ಞ ಡಾ. ಎಚ್ ನರಸಿಂಹಯ್ಯ
ವ್ಯಕ್ತಿ ವಿಶೇಷ ಪುಟ 9





ಸಂಪುಟ - 3 ಏಪ್ರಿಲ್ - 2023 ಸಂಚಿಕೆ - 34


## ಭಾರತೀಯ ಜನತಾಪಕ್ಷಕ್ಕೆ

# ದಕ್ಷಿಣದ ಹೆಬ್ಬಾಗಿಲು ತೆರೆದ ಅನಂತಕುಮಾರ್

**ವಿಶೇಷ ಲೇಖನ - ಜಿ ಎಂ ಇನಾಂದಾರ್**



ಕರ್ನಾಟಕದಲ್ಲಿ ವಿಧಾನಸಭೆಯ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಭಾರತೀಯ ಜನತಾ ಪಕ್ಷವನ್ನು ಕಟ್ಟಿ ಬೆಳೆಸಿದ ಕಾರ್ಯಕರ್ತರನ್ನು ಹಾಗೂ ನಾಯಕರನ್ನು ಸ್ಮರಿಸಿಕೊಳ್ಳುವುದು ಅಗತ್ಯ. ಜಗನ್ನಾಥ ರಾವ್ ಜೋಶಿ, ಭಾವೂರಾವ್ ದೇಶಪಾಂಡೆ ಮೊದಲಾದ ಅನೇಕ ಹಿರಿಯರ ಜೊತೆಗೆ ರಾಜಕೀಯ ಸೂಕ್ಷ್ಮಜ್ಞತೆಯಿಂದ ಗಣನೀಯ ಸೇವೆ ಸಲ್ಲಿಸಿದ ಅನಂತಕುಮಾರರನ್ನು ಕೂಡ ನೆನೆಸಿಕೊಳ್ಳಲು ಇದು ಸಕಾಲ.

ಅನಂತಕುಮಾರರು ಬಿಜೆಪಿಯ ರಾಜ್ಯ ಪ್ರಧಾನಕಾರ್ಯದರ್ಶಿಯಾಗಿ 1989ರಲ್ಲಿ ಮೊದಲ ಚುನಾವಣೆ ಎದುರಿಸಿದರು. ಆಗ ಮೊಟ್ಟ ಮೊದಲ ಬಾರಿಗೆ ಬಿಜೆಪಿ 118 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಪಕ್ಷದ ರಾಜ್ಯಾಧ್ಯಕ್ಷರಾಗಿದ್ದ ಬಿ. ಎಸ್. ಯಡಿಯೂರಪ್ಪನವರು ಶಿವಮೊಗ್ಗದಿಂದಲೂ, ಹಿರಿಯ ನಾಯಕ ಬಿ. ಬಿ. ಶಿವಪ್ಪನವರು ತಮ್ಮ ಕ್ಷೇತ್ರವಾದ ಸಕಲೇಶಪುರದಿಂದಲೂ ಸ್ಪರ್ಧಿಸಿದ್ದರು. ಆಗ ಅನಂತಕುಮಾರ್ ಇಡೀ ರಾಜ್ಯದ ಚುನಾವಣಾ ಪ್ರಚಾರದ ಜವಾಬ್ದಾರಿ ವಹಿಸಿಕೊಂಡು 18 ದಿನಗಳ ಕಾಲ ಸತತವಾಗಿ ಪ್ರವಾಸ ಮಾಡಿದರು. ಇಬ್ಬರು ಚಾಲಕರ ಸಮೇತ ಒಂದು ಅಂಬಾಸಿಡರ್ ಕಾರಿನಲ್ಲಿ ನಿರಂತರವಾಗಿ ರಾಜ್ಯಾದ್ಯಂತ ತಿರುಗಾಡಿದರು. ಸತತ 18 ದಿನಗಳನ್ನು ಕಾರಿನಲ್ಲಿಯೇ ಕಳೆದು ಪ್ರಚಾರ ಕೈಗೊಂಡರು. ಪ್ರತಿದಿನ ಆರರಿಂದ ಏಳು ಚುನಾವಣಾ ಪ್ರಚಾರ ಸಭೆಗಳನ್ನು ನಡೆಸುವುದರ ಜೊತೆಗೆ ಆಯಾ ಕ್ಷೇತ್ರಗಳ ವಿದ್ಯಾರ್ಥಿ ಪರಿಷತ್, ಬಿಜೆಪಿ ಹಾಗೂ ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಪ್ರಚಾರಕಾರ್ಯದಲ್ಲಿ ತತ್ಪರರಾಗುವಂತೆ ಹುರಿದುಂಬಿಸಿದರು.

ಈ ಸಂದರ್ಭದಲ್ಲಿ ಕಾರ್ಯತತ್ಪರರಾಗಿದ್ದ ಅನಂತಕುಮಾರರಿಗೆ ಬೆನ್ನೆಲುಬಾಗಿ ನಿಂತವರು ಶ್ರೀಮತಿ ತೇಜಸ್ವಿನಿ ಅನಂತಕುಮಾರ್. ಸಂಪನ್ಮೂಲ ಮತ್ತು ಸಂಪರ್ಕ ಸಾಧನಗಳ ಕೊರತೆಯಿದ್ದ ಕಾಲದಲ್ಲಿ ನಿಂತಲ್ಲಿ ನಿಲ್ಲುವ ಅಭ್ಯಾಸವಿಲ್ಲದ ಅನಂತಕುಮಾರರ ದೈನಂದಿನ ಅಗತ್ಯಗಳನ್ನು ಅವರಿರುವ ಜಾಗದಲ್ಲಿಯೇ ಒದಗಿಸುತ್ತಿದ್ದರು. ಅವರ ಮನೆ ಹೆಚ್ಚುಕಡಿಮೆ ಪಕ್ಷದ ಕಚೇರಿಯೇ ಆಗಿತ್ತು. ರಾಮರಥ ಯಾತ್ರೆಯ ಆಯೋಜನೆಯ ಸಂದರ್ಭದಲ್ಲಿ ಅದ್ವಾನಿಯವರ ಸೂಕ್ಷ್ಮ ಆರೋಗ್ಯಕ್ಕೆ ಸೂಕ್ತವಾದ ಆಹಾರವನ್ನು ಮನೆಯಿಂದಲೇ ಕಳಿಸುತ್ತಿದ್ದರು. ಅವರಿಗೆ ಪ್ರಿಯವಾದ ಬೇಸನ್ ಲಡ್ಡು ಕೂಡ ಇವರ ಮನೆಯಿಂದಲೇ ಪೂರೈಕೆಯಾಗುತ್ತಿತ್ತು. ಚುನಾವಣಾ ಪ್ರಚಾರದಲ್ಲಿ ನಿರತರಾಗಿದ್ದ ಅನಂತಕುಮಾರರ ನೇಪಥ್ಯದ ಜವಾಬ್ದಾರಿಯನ್ನು ಸಂಪೂರ್ಣವಾಗಿ ತೇಜಸ್ವಿನಿಯವರೇ ನಿರ್ವಹಿಸುತ್ತಿದ್ದರು. ನಂತರ ನಡೆದ ಪ್ರತಿ ಚುನಾವಣೆಯಲ್ಲೂ ತೇಜಸ್ವಿನಿಯವರು ಅನಂತಕುಮಾರರ ಪರಿಶ್ರಮಕ್ಕೆ ಪೂರಕವಾದ ಪಾತ್ರವನ್ನು ನಿರ್ವಹಿಸುತ್ತಿದ್ದರು. ಅನಂತಕುಮಾರರ ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸುವ ಹೊಣೆ ಅವರದ್ದಾಯಿತು. 1996ರಲ್ಲಿ ಪ್ರಥಮ ಬಾರಿಗೆ ಟೆಲಿಫೋನ್ ಮೂಲಕ ಪ್ರಚಾರದ ಪರಿಕಲ್ಪನೆಯನ್ನು ಅವರು ನಿರೂಪಿಸಿದರು. ಚುನಾವಣೆಯಲ್ಲಿ ಮಹಿಳಾ ಸ್ವಯಂಸೇವಕರ ತಂಡವನ್ನೂ ಅವರು ಕಟ್ಟಿ ಪ್ರಚಾರದಲ್ಲಿ ಭಾಗವಹಿಸಿದರು.



1989ರ ಚುನಾವಣೆಯಲ್ಲಿ ಕರ್ನಾಟಕದ ವಿಧಾನ ಸಭೆಯಲ್ಲಿ ಪಕ್ಷಕ್ಕೆ ನಾಲ್ಕು ಸ್ಥಾನಗಳಲ್ಲಿ ವಿಜಯ ಗಳಿಸುವುದು ಸಾಧ್ಯವಾಯಿತು. ಇದರಿಂದ ನಿರುತ್ಸಾಹಗೊಳ್ಳದ ಅನಂತಕುಮಾರರು ಮುಂದಿನ ಲೋಕಸಭಾ ಚುನಾವಣೆಗಾಗಿ ಅಹರ್ನಿಶಿ ಪ್ರಯತ್ನದಲ್ಲಿ ನಿರತರಾದರು. ಬಿ. ಎಸ್. ಯಡಿಯೂರಪ್ಪನವರು ಹಾಗೂ ಅನಂತಕುಮಾರರು ನಿರಂತರ ರಾಜ್ಯ ಪ್ರವಾಸ ಕೈಗೊಂಡು ಪಕ್ಷವನ್ನು ಬಲಗೊಳಿಸತೊಡಗಿದರು. ಅದ್ವಾನಿಯವರ ರಾಮ ರಥಯಾತ್ರೆ, ಅನಂತಕುಮಾರರ ಚತುರ ಚುನಾವಣಾ ವ್ಯೂಹ ರಚನೆ ಹಾಗೂ ಯಡಿಯೂರಪ್ಪನವರ ಹೋರಾಟಗಳ ಬಲದಿಂದ ಬಿಜೆಪಿ ನಾಲ್ಕು ಲೋಕಸಭಾ ಸ್ಥಾನಗಳನ್ನು ಗಳಿಸಲು ಯಶಸ್ವಿಯಾಯಿತು.


ಪುಟ 4 ರಲ್ಲಿ ಮುಂದುವರೆದಿದೆ





## ಅನಂತಪ್ರೇರಣಾ ಕೇಂದ್ರದಲ್ಲಿ ಮಕ್ಕಳ ಕಲರವ

ಹುಬ್ಬಳ್ಳಿಯ ಅನಂತಪ್ರೇರಣಾ ಕೇಂದ್ರದಲ್ಲಿ ಸುನಿಧಿ ಕಲಾಸೌರಭದ ಸಹಯೋಗದೊಡನೆ ನಡೆದ ಬೇಸಗೆ ಸಾಂಸ್ಕೃತಿಕ ಶಿಬಿರದಲ್ಲಿ ಅನೇಕ ಮಕ್ಕಳು ಸಂಭ್ರಮ ಸಡಗರಗಳಿಂದ ಭಾಗವಹಿಸಿದ್ದರು.

# ಬೆಂಗಳೂರು ನಗರದ ಹಲವು ಪುರಾತನ ದೇವಾಲಯಗಳು

ದೇಗುಲದರ್ಶನ ಮಾಲಿಕೆ - 21

ಈ ತಿಂಗಳ ದೇಗುಲದರ್ಶನ ಕಾರ್ಯಕ್ರಮದಲ್ಲಿ ನಾವು ಬೆಂಗಳೂರು ನಗರದ ಹಲವು ಪುರಾತನ ದೇವಾಲಯಗಳ ಪರಿಚಯ ಮಾಡಿಕೊಳ್ಳೋಣ.

ಬೆಂಗಳೂರು ಎಂಬ ಹೆಸರು ಒಂಬತ್ತನೇ ಶತಮಾನದ ಗಂಗರ ಕಾಲದ ಬೇಗೂರು ಶಾಸನದಲ್ಲೇ ಉಲ್ಲೇಖಗೊಂಡಿದೆ. ಗಂಗ, ಚೋಳರಾದಿಯಾಗಿ ಮಾಗಡಿಯ ಕೆಂಪೇಗೌಡರ ವರೆಗೆ ಅನೇಕ ರಾಜವಂಶಗಳ ಆಳ್ವಿಕೆಗೆ ಒಳಪಟ್ಟಿದ್ದ ಬೆಂಗಳೂರಿನ ಆಧುನಿಕ ಬಡಾವಣೆಗಳ ನಡುವೆ ಅನೇಕ ಬೀದಿ, ಗಲ್ಲಿಗಳಲ್ಲಿ ಅನೇಕ ಪುರಾತನ ದೇಗುಲಗಳು ಅಲ್ಲಲ್ಲಿ ಹುದುಗಿಕೊಂಡಂತೆ ಕಂಡುಬರುತ್ತವೆ. ಇಂತಹ ದೇಗುಲಗಳು ಬಹುಸಂಖ್ಯೆಯಲ್ಲಿದ್ದು ಕೆಲವು ಗುಡಿಗಳಲ್ಲಿ ನಿತ್ಯಪೂಜಾದಿಗಳು ಸಲ್ಲುತ್ತಿದ್ದರೆ, ಇನ್ನು ಹಲವು ಗುಡಿಗಳು ಸುಸ್ಥಿತಿಯಲ್ಲಿದ್ದರೂ ಸಾರ್ವಜನಿಕರ ಅವಜ್ಞೆಗೆ ಗುರಿಯಾಗಿರುವುದೂ ಉಂಟು.

ಮೈಸೂರು ರಸ್ತೆ ಬ್ಯಾಟರಾಯನಪುರದ ಗಾಳಿ ಆಂಜನೇಯ ದೇವಾಲಯ ಬೆಂಗಳೂರಿನ ಬಹು ಪ್ರಸಿದ್ಧ ದೇಗುಲಗಳಲ್ಲೊಂದು. 16ನೇ ಶತಮಾನದ ವಿಜಯನಗರದ ಕಾಲಕ್ಕೆ ಸೇರಿರಬಹುದಾದ ಈ ಗುಡಿಯಲ್ಲಿ ಆಂಜನೇಯಸ್ವಾಮಿ ಲೋಕಪ್ರಿಯನಾಗಿ ಪೂಜಿತನಾಗುತ್ತಿದ್ದಾನೆ. ಗುಡಿಯ ಸಂಕೀರ್ಣದಲ್ಲಿರುವ ಸೀತಾರಾಮ, ವೆಂಕಟೇಶ್ವರ ವಿಗ್ರಹಗಳೂ ಆಕರ್ಷಕವಾಗಿವೆ.

ಬ್ಯಾಟರಾಯನಪುರ ಎಂಬ ಹೆಸರು ಬರಲು ಕಾರಣ, ಇಲ್ಲಿರುವ ಬೇಟೆರಾಯಸ್ವಾಮಿ ದೇವಾಲಯ. ಬೇಟೆರಾಯನ ಹೆಸರಿನ ಕೃಷ್ಣನ ಶಿಲ್ಪ ಕುತೂಹಲ ಮೂಡಿಸುವಂತಿದೆ. ಇಲ್ಲೇ ಸಮೀಪದಲ್ಲಿ ಮೈಸೂರು ರಸ್ತೆಯ ಬದಿಯಲ್ಲಿ ಪ್ಲೇಗ್ ಮಾರಮ್ಮ ಎಂಬ ಹೆಸರಿನ ದೇವತೆಯ ಗುಡಿಯಿದೆ. ಕಳೆದ ಶತಮಾನದ ಪ್ರಾರಂಭದಲ್ಲಿ ಬೆಂಗಳೂರಿನ ಜನತೆ ಪ್ಲೇಗ್ ಸಾಂಕ್ರಾಮಿಕದ ಭೀತಿಗೆ ಗುರಿಯಾಗಿದ್ದಾಗ ಸ್ಥಾಪಿತವಾದ ಈ ಗುಡಿಯಲ್ಲಿ ದುರ್ಗೆಯ ವಿವಿಧ ರೂಪಗಳನ್ನು ಬಿಂಬಿಸುವ ದೇವತಾಮೂರ್ತಿಗಳಿವೆ. ವೀಣಾಧರ ಶಿವ, ದಕ್ಷಿಣಾಮೂರ್ತಿ ಮೊದಲಾದ ಕಿರುವಿಗ್ರಹಗಳೂ ಗಮನಸೆಳೆಯುವಂತಿವೆ.

ಮೈಸೂರು ರಸ್ತೆಯಿಂದ ವಿಜಯನಗರದತ್ತ ಹೊರಳುವ ರಸ್ತೆಯಲ್ಲಿ ಮುಂದುವರಿದರೆ ಅತ್ತಿಗುಪ್ಪೆಯ ನರಸಿಂಹದೇವಾಲಯವನ್ನು ಕಾಣಬಹುದು. ನಾಲ್ಕುನೂರು ವರುಷಗಳ ಹಿಂದಿನ ಪಾಳೇಗಾರರ ಆಳ್ವಿಕೆಯ ಕಾಲದ್ದೆನ್ನಬಹುದಾದ ಈ ಗುಡಿಯನ್ನು ನವೀಕರಿಸಲಾಗಿದೆ. ಗರ್ಭಗುಡಿಯಲ್ಲಿ ಲಕ್ಷ್ಮೀಸಮೇತ ನರಸಿಂಹ ದೇವರ ಶಿಲ್ಪವಿದ್ದು ನಿತ್ಯಪೂಜಾದಿಗಳು ಸಾಂಗವಾಗಿ ಜರುಗುತ್ತಿವೆ.













ಬೆಂಗಳೂರು ನಗರದ ಕೇಂದ್ರಭಾಗದ ಬಸ್ ನಿಲ್ದಾಣದ ಇನ್ನೊಂದು ಕೊನೆಯಲ್ಲಿ ಜನನಿಬಿಡ ವ್ಯಾಪಾರಕೇಂದ್ರವಾದ ಬಳೇಪೇಟೆಯಿದೆ. ಇಲ್ಲಿ ಹಲವಾರು ಹಳೆಯ ದೇಗುಲಗಳನ್ನು ಕಾಣಬಹುದು. ಉಪ್ಪಾರಪೇಟೆ ಪೋಲೀಸ್ ಠಾಣೆಯ ಬದಿಯಲ್ಲಿರುವ ವರಸಿದ್ಧಿವಿನಾಯಕ ಮತ್ತು ಆಂಜನೇಯ ಗುಡಿಗಳು ದರ್ಶನೀಯವಾಗಿವೆ. ಬಸ್ ನಿಲ್ದಾಣವಿರುವ ಜಾಗ ಹಿಂದೆ ಧರ್ಮಾಂಬುಧಿ ಕೆರೆಯಾಗಿದ್ದು ನೀರು ಈ ಗುಡಿಯ ಆಂಜನೇಯನ ಪಾದದವರೆಗೂ ಹರಿಯುತ್ತಿದ್ದಿತೆಂದು ಹೇಳುತ್ತಾರೆ.

ಉಪ್ಪಾರಪೇಟೆ ಠಾಣೆಯ ಎದುರಿನ ತುಳಸಿತೋಟದಲ್ಲಿ ದೊಡ್ಡ ದೇವಾಲಯ ಸಂಕೀರ್ಣವೇ ಇದೆ. ಕೃಷ್ಣಸ್ವಾಮಿ ದೇವಾಲಯದ ವಿಶಾಲವಾದ ಆವರಣದಲ್ಲಿ ಬೆಣ್ಣೆ ಕೃಷ್ಣ, ಶ್ರೀರಾಮ, ಲಕ್ಷ್ಮೀ, ಆಂಡಾಳ್, ವೆಂಕಟೇಶ್ವರ, ಆಂಜನೇಯ ಮೊದಲಾದ ದೇವರ ಪ್ರತ್ಯೇಕ ಗುಡಿಗಳಿದ್ದು ದರ್ಶನೀಯವಾಗಿವೆ.

ಈ ಸಂಕೀರ್ಣದ ಹಿಂಭಾಗದ ರಸ್ತೆಯಲ್ಲಿರುವ ಮಂಜಿ ಸೋಮೇಶ್ವರ ದೇವಾಲಯವನ್ನು ಕೊಡಗಿನ ಅರಸರ ಕಾಲದಲ್ಲಿ ಕಟ್ಟಲಾಯಿತು. ಸೋಮೇಶ್ವರನೆಂಬ ಹೆಸರಿನ ಶಿವಲಿಂಗವಲ್ಲದೆ, ವಿಷ್ಣು, ಪಾರ್ವತಿ, ಗಣಪತಿ ಮೊದಲಾದ ದೇವತಾವಿಗ್ರಹಗಳೂ ಇಲ್ಲಿವೆ. ಸನಿಹದಲ್ಲೇ ಇರುವ ವೆಂಕಟರಮಣ ದೇವಾಲಯವನ್ನು 19ನೇ ಶತಮಾನದಲ್ಲಿ ಶ್ರೀ ಲಾಲದಾಸ್ ಎಂಬ ಮಹನೀಯರು ಕಟ್ಟಿಸಿದರಂತೆ. ಇಲ್ಲಿ ವೆಂಕಟೇಶ್ವರನ ಗುಡಿಯಲ್ಲದೆ, ಸೀತಾಲಕ್ಷ್ಮಣ ಸಹಿತ ರಾಮನ ಅಮೃತಶಿಲಾ ಮೂರ್ತಿಗಳೂ ಪೂಜೆಗೊಳ್ಳುತ್ತಿವೆ.

ಬಳೇಪೇಟೆಯ ಮುಖ್ಯರಸ್ತೆಯಲ್ಲಿರುವ ಸುಗ್ರೀವ ವೆಂಕಟರಮಣ ದೇವಾಲಯವನ್ನು 1650ರಲ್ಲಿ ಈ ಭಾಗವನ್ನು ಆಳುತ್ತಿದ್ದ ಸ್ಥಳೀಯ ಅರಸರು ನಿರ್ಮಿಸಿದರೆಂದು ಉಲ್ಲೇಖವಿದೆ. ಕೆಂಪಾಂಬುಧಿ ಕೆರೆಯಲ್ಲಿ ದೊರೆತ ವಾಲಿ ಸುಗ್ರೀವರದ್ದೆನ್ನಲಾದ ಎರಡು ದೊಡ್ಡ ಶಿಲಾಮೂರ್ತಿಗಳು ಈ ಗುಡಿಯಲ್ಲಿ ಪೂಜೆಗೊಳ್ಳುತ್ತಿವೆ. ಮುಖ್ಯ ಗರ್ಭಗುಡಿಯಲ್ಲಿ ವೆಂಕಟರಮಣನ ಶಿಲಾಮೂರ್ತಿಯಿದೆ.


**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ**

LINK- http://YouTube.com/AnanthkumarPratishthana

# ಅನಂತಯಾನ ಅಧ್ಯಾಯ- 10

# ಸಾರ್ಥಕ ಬದುಕಿನ ಅಂತ್ಯ

ನಿರೂಪಣೆ : ಟಿ.ಎಸ್. ಗೋಪಾಲ್




ತನ್ನ ತಂದೆ ನರಹರಿ ಶಾಸ್ತ್ರಿಯವರನ್ನು ಸ್ಮರಿಸುವಾಗಲೆಲ್ಲ ಅವರ ಕೊನೆಯ ಮಗಳು ನಾಗರತ್ನಳಿಗೆ ಒಂದು ವಿಷಯ ಅಚ್ಚರಿ ಮೂಡಿಸುವುದಿದೆ: ಆಕೆ ತನ್ನ ತಂದೆ ನಡೆದಾಡಿದುದನ್ನು ಎಂದೂ ಕಂಡೇ ಇರಲಿಲ್ಲವಂತೆ!

ನಾಗರತ್ನಳ ನೆನಪಿನಲ್ಲಿ ಉತ್ಪ್ರೇಕ್ಷೆಯೂ ಇರಲಿಕ್ಕಿಲ್ಲ. ನಾಗರತ್ನ ಚಿಕ್ಕವಳಿದ್ದಾಗಲೇ ಆಕೆಯ ತಂದೆ ಶ್ವಾಸಕೋಶದ ಕ್ಷಯಕ್ಕೆ ಗುರಿಯಾಗಿ ಉದ್ಯೋಗಕ್ಕೆ ಹೋಗುವುದನ್ನು ನಿಲ್ಲಿಸಬೇಕಾಗಿ ಬಂದಿತ್ತು. ಮನೆಯ ಕೊಠಡಿಯಲ್ಲಿ ಕುಳಿತೇ ಅವರು ಜ್ಯೋತಿಷಾದಿ ವಿಷಯಗಳಲ್ಲಿ ವಿಚಾರ ವಿನಿಮಯ ನಡೆಸುತ್ತಿದ್ದರು. ಕೊನೆಯ ವರುಷಗಳಲ್ಲಿ ತೀವ್ರ ಅನಾರೋಗ್ಯದಿಂದ ಹಾಸಿಗೆ ಹಿಡಿದ ತಂದೆಯ ಆರೈಕೆಯನ್ನು ತಾಯಿ, ಅಣ್ಣಂದಿರೊಡಗೂಡಿ ನಾಗರತ್ನಳೂ ನಿರ್ವಹಿಸುತ್ತಿದ್ದಳು.

ನಾರಾಯಣ ಶಾಸ್ತ್ರಿ ಉದ್ಯೋಗದ ಮೊದಲ ವರುಷಗಳಲ್ಲಿ ಮೈಸೂರಿನಲ್ಲೇ ಇದ್ದರು. ಅವಿಭಕ್ತ ಕುಟುಂಬದ ಹಲವು ಸದಸ್ಯರು ಉದ್ಯೋಗನಿಮಿತ್ತ ಹೊರವೂರುಗಳಿಗೆ ಹೋಗಿದ್ದರು. ನರಹರಿ ಶಾಸ್ತ್ರಿಗಳನ್ನು ನೋಡಿಕೊಳ್ಳಲು ಅವರ ಪತ್ನಿ, ಮಗಳು ಸೇರಿದಂತೆ ಮನೆಯಲ್ಲಿ ಹಲವರಿದ್ದರು. ಅಕ್ಕಯ್ಯಮ್ಮನವರು ಅಡುಗೆ ಕೆಲಸ ಹೊರತುಪಡಿಸಿದಂತೆ ಪತಿಯ ಆರೈಕೆಯಲ್ಲಿ ನಿರತರಾಗಿರುತ್ತಿದ್ದರು. ಮಕ್ಕಳೂ, ಅಣ್ಣಂದಿರ ಮಕ್ಕಳು, ಮೊಮ್ಮಕ್ಕಳೂ ಶಾಸ್ತ್ರಿಯವರ ಉಪಚಾರಕ್ಕೆ ಸಿದ್ಧವಾಗಿರುತ್ತಿದ್ದರು. ಅತಿಯಾಗಿದ್ದ ಮಧುಮೇಹದ ನಿಯಂತ್ರಣಕ್ಕೆ ಇನ್ಸುಲಿನ್ ಚುಚ್ಚುಮದ್ದು ಕೊಡುವುದನ್ನೂ ಕೆಲವರು ಕಲಿತುಕೊಂಡಿದ್ದರು. ಶಾಸ್ತ್ರಿಗಳ ಡಾಕ್ಟರ್ ಗೆಳೆಯ ಮರಿಸ್ವಾಮಿಯವರು ಆಗಾಗ ಬಂದು ಉಪಚರಿಸುತ್ತಿದ್ದರು.

ಲಕ್ಷ್ಮೀಪುರದ ಮನೆಯಲ್ಲಿ ಶಾಸ್ತ್ರಿಗಳನ್ನು ನೋಡಲು ಬರುವವರ ಸಂಖ್ಯೆಯೂ ಕಡಿಮೆಯಾಗತೊಡಗಿತ್ತು. ಕೃಷ್ಣಮೂರ್ತಿಪುರದಲ್ಲೇನೋ ಬಂದುಹೋಗುವವರಿಗೆ ಲೆಕ್ಕವಿರುತ್ತಿರಲಿಲ್ಲ. ಶಾಸ್ತ್ರಿಗಳ ಅನಾರೋಗ್ಯವನ್ನು ಲೆಕ್ಕಿಸದೆ ಜನ ಬರುತ್ತಲೇ ಇರುತ್ತಿದ್ದರು. ಪಾಪ, ಬಂದವರಿಗೆ ನಿರಾಶೆಯಾಗಬಾರದೆಂದು ಶಾಸ್ತ್ರಿಗಳೂ ಅವರ ನಿರೀಕ್ಷೆಯನ್ನು ಹುಸಿಗೊಳಿಸದೆ ಫಲಾಫಲಗಳನ್ನು ಹೇಳಿ ಕಳುಹಿಸುತ್ತಿದ್ದರು. ಇಲ್ಲಿ ಲಕ್ಷ್ಮೀಪುರದಲ್ಲಿ ಹಾಗಲ್ಲ. ಮುಂದಿನ ಗೋಪಾಲರತ್ನಂ ಮನೆಯನ್ನು ಹಾದು ಹಿಂಬದಿಯ ಮನೆಗೆ ಬರಬೇಕು. ಹಾಗೆ ಬಂದವರನ್ನು ಗೋಪಾಲರತ್ನಂ ತಡೆದು ಶಾಸ್ತ್ರಿಗಳಿಗೆ ಹುಷಾರಿಲ್ಲ, ಅವರಿಗೆ ತೊಂದರೆ ಕೊಡಬೇಡಿ ಎಂದು ಹೇಳಿ ಕಳುಹಿಸಿಬಿಡುತ್ತಿದ್ದರು.

ವೈದ್ಯರು ಅಂದುಕೊಂಡಂತೆಯೇ ಆಯಿತು. ಶಾಸ್ತ್ರಿಗಳಿಗೆ ಗ್ಯಾಂಗ್ರಿನ್ ತಗುಲಿ ಮೊದಲು ಬಲಗಾಲನ್ನು ಕತ್ತರಿಸಬೇಕಾಗಿ ಬಂದಿತು. ಪಾರ್ಶ್ವವಾಯು ಎರಗಿದ ಪರಿಣಾಮ ದೇಹದ ಶಕ್ತಿ ಕುಂದಿತ್ತು. ಅವರಿಗೆ ಸ್ನಾನಾದಿಗಳ ಉಪಚಾರವಾಗಬೇಕಿತ್ತಲ್ಲ, ನಾರಾಯಣ ಶಾಸ್ತ್ರಿಗಳೇ ತಂದೆಯನ್ನು ಲೀಲಾಜಾಲವಾಗಿ ಎತ್ತಿಕೊಂಡು ಹೋಗಿ ಸ್ನಾನ ಮಾಡಿಸಿ ಕರೆತರುತ್ತಿದ್ದರು. ಮಗುವನ್ನು ನೋಡಿಕೊಳ್ಳುವಂತೆಯೇ ಉಪಚರಿಸುತ್ತಿದ್ದರು. ಇನ್ ಸುಲಿನ್ ಚುಚ್ಚುವಾಗಲೂ ನೋವಾಗದಂತೆ ಎಚ್ಚರವಹಿಸುತ್ತಿದ್ದರು.

ತಮ್ಮ ಜೀವಿತದ ಕೊನೆಯ ಹತ್ತು ಹದಿನೈದು ವರ್ಷಗಳ ಅವಧಿಯಲ್ಲಿ ನರಹರಿ ಶಾಸ್ತ್ರಿಗಳನ್ನು ಅನಾರೋಗ್ಯ ಕಾಡಿದ್ದೇ ಹೆಚ್ಚು. ತಾವು ಬದುಕಿದ್ದ ಅರವತ್ತೆರಡು ವರುಷಗಳ ಅವಧಿಯಲ್ಲಿ ಶಾಸ್ತ್ರಿಗಳು ತಮ್ಮ ಕುಟುಂಬದ ಏಳಿಗೆಯನ್ನು ಕಂಡರು. ಮಕ್ಕಳ ಮದುವೆಯಾಗಿ, ಮೊಮ್ಮಕ್ಕಳ ಜನನವನ್ನೂ ನೋಡಿ ಸಂತೋಷಪಟ್ಟರು. ಅನಂತಕುಮಾರ (೧೯೫೯) ಹುಟ್ಟಿದ ನಂತರ ಸುವಾಸಿನಿ (೧೯೬೧ ಜೂನ್) ಜನಿಸಿದಳು. ಈ ವೇಳೆಗೆ ನಾರಾಯಣ ಶಾಸ್ತ್ರಿ ಹುಬ್ಬಳ್ಳಿಯ ರೈಲ್ವೆ ಕಚೇರಿಗೆ ವರ್ಗವಾಗಿ ಹೋಗಿದ್ದರು. ಮೊದಲೆರಡು ಬಾಣಂತನಗಳಿಗೆ ಬೆಂಗಳೂರಿನಲ್ಲಿ ತಂದೆಯ ಮನೆಗೆ ಹೋಗಿದ್ದ ಗಿರಿಜಾ ಮಾರನೆಯ ವರ್ಷ ೧೯೬೨ ಆಗಸ್ಟ್ ತಿಂಗಳಲ್ಲಿ ಮೂರನೆಯ ಮಗು ಜನಿಸುವ ವೇಳೆಗೆ ಮೈಸೂರಿನಲ್ಲೇ ಇದ್ದರು. ಹೆರಿಗೆಗೆಂದು ಆಸ್ಪತ್ರೆಗೆ ಹೋದಾಗ ಡಾಕ್ಟರು ಮಗುವಿನ ಕಾಲು ಮುಂದಾಗಿರುವುದರಿಂದ ಹೆರಿಗೆ ತಡವಾಗಬಹುದು ಎಂದಿದ್ದರು.

ಇತ್ತ ಮನೆಯಲ್ಲಿ ಅನಾರೋಗ್ಯದಿಂದ ಹಾಸಿಗೆಹಿಡಿದಿದ್ದ ನರಹರಿ ಶಾಸ್ತ್ರಿಗಳು ತಮ್ಮ ಜ್ಯೋತಿಷ ಪರಿಣತಿಯ ಮೂಲಕ ವಿಶ್ಲೇಷಿಸಿದರು. ನರಹರಿ ಶಾಸ್ತ್ರಿಗಳದ್ದೂ ಅವರ ಹಿರಿಯ ಮಗ ನಾರಾಯಣ ಶಾಸ್ತ್ರಿಗಳದ್ದೂ ಒಂದೇ ರಾಶಿ - ವೃಶ್ಚಿಕ, ಒಂದೇ ನಕ್ಷತ್ರ- ಅನೂರಾಧ. ಈಗ ಹುಟ್ಟಲಿರುವ ಮೊಮ್ಮಗನೂ ಅದೇ ವೃಶ್ಚಿಕ ರಾಶಿ, ಅನೂರಾಧ ನಕ್ಷತ್ರದಲ್ಲಿ ಜನಿಸುತ್ತಾನೆ ಎಂದು ಶಾಸ್ತ್ರಿಗಳು ನುಡಿದರು. ಹೀಗೆ ಒಂದು ಕುಟುಂಬದಲ್ಲಿ ಏಕನಕ್ಷತ್ರ, ಏಕರಾಶಿಯ ಮೂರು ತಲೆಮಾರಿನವರು ಜೀವಿಸಿರುವುದು ಸಂಭವವಲ್ಲ. ಒಂದು ತಲೆ ಉಳಿಯುವುದಿಲ್ಲ ಎಂಬ ಭವಿಷ್ಯವಾಣಿಯನ್ನೂ ನುಡಿದರು. ಪತ್ನಿಯ ಹೆರಿಗೆಯ ಬಗೆಗೆ ಮೊದಲೇ ಚಿಂತೆಗೀಡಾಗಿದ್ದ ನಾರಾಯಣ ಶಾಸ್ತ್ರಿಗಳಿಗೆ ತಂದೆಯ ನುಡಿಗಳಿಂದ ತುಂಬ ಆತಂಕವಾಯಿತು. ಮಗನನ್ನು ಸಮಾಧಾನ ಪಡಿಸಿದ ನರಹರಿ ಶಾಸ್ತ್ರಿಗಳು ತಮ್ಮ ಜೀವಿತದ ಅವಧಿ ಮುಗಿದಿರುವುದಾಗಿಯೂ ಹಿರಿಯ ತಲೆಮಾರಿನ ಕೊನೆ ಸಹಜವೆಂದೂ ಸಾಂತ್ವನ ಹೇಳಿದರು. ೧೯೬೨ ಆಗಸ್ಟ್ ೯ ರಂದು ನಂದಕುಮಾರನ ಜನನವಾಯಿತು. ಅದೇ ವೃಶ್ಚಿಕ ರಾಶಿ ಅನೂರಾಧ ನಕ್ಷತ್ರ!

ಇತ್ತ ನರಹರಿ ಶಾಸ್ತ್ರಿಗಳ ಆರೋಗ್ಯಸ್ಥಿತಿ ಹದಗೆಡುತ್ತ ಹೋಯಿತು. ಗ್ಯಾಂಗ್ರಿನ್ ಪರಿಣಾಮವಾಗಿ ಈಗಾಗಲೇ ಎರಡೂ ಕಾಲುಗಳನ್ನು ಕಳೆದುಕೊಂಡಿದ್ದ ಶಾಸ್ತ್ರಿಗಳ ಶ್ವಾಸಕೋಶವೂ ಹಾನಿಗೀಡಾಗಿತ್ತು. ಆಸ್ಪತ್ರೆಗೆ ಸೇರಿದ ಕೊನೆಯ ದಿನಗಳಲ್ಲಿ ಶಾಸ್ತ್ರಿಗಳು ಬಹುಕಷ್ಟಪಟ್ಟರು. ೧೯೬೨ ಆಗಸ್ಟ್ ೨೨. ಶಾಸ್ತ್ರಿಗಳ ಕಿರಿಯಮಗ ಕೃಷ್ಣಮೂರ್ತಿಯೂ ಸೋದರಬಂಧು ರಾಮಮೂರ್ತಿಯೂ ಅಂದು ಬೆಳಗ್ಗೆ ಆಸ್ಪತ್ರೆಗೆ ಹೋಗಿ ತಂದೆಯ ಆರೋಗ್ಯದ ಸ್ಥಿತಿಯ ಬಗೆಗೆ ಡಾಕ್ಟರರನ್ನು ಕೇಳಿದರು. ಇನ್ನು ಅವರು ಚೇತರಿಸಿಕೊಳ್ಳುವುದು ಕಷ್ಟ ಎಂದು ಅವರು ಸ್ಪಷ್ಟವಾಗಿ ಹೇಳಿದರು. ಡಾಕ್ಟರರು ಬಂದುಹೋದ ಹತ್ತು ಹದಿನೈದು ನಿಮಿಷಗಳಲ್ಲೇ ಶಾಸ್ತ್ರಿಗಳು ಕೊನೆಯುಸಿರೆಳೆದರು.

ತಾತ ನರಹರಿಶಾಸ್ತ್ರಿಗಳು ನಿಧನರಾದಮೇಲೆ ಕೆಲವು ತಿಂಗಳುಗಳಲ್ಲಿ ಅನಂತಕುಮಾರ ತನ್ನ ತಂದೆತಾಯಿಯರೊಡನೆ ಹುಬ್ಬಳ್ಳಿಗೆ ಹಿಂತಿರುಗಿದ. ಈಗ ಶಾಸ್ತ್ರಿಗಳ ಸಂಸಾರದಲ್ಲಿ ಅನಂತಕುಮಾರ, ಅವನ ತಂಗಿ ಸುವಾಸಿನಿಯಲ್ಲದೆ ಹೊಸ ಸದಸ್ಯನಾಗಿ ಮಗು ನಂದಕುಮಾರನೂ ಇದ್ದ.

* * * * *

ತಮ್ಮ ಪತಿ ನರಹರಿ ಶಾಸ್ತ್ರಿ ಮತ್ತವರ ಕುಟುಂಬ ಸದಸ್ಯರ ಯೋಗಕ್ಷೇಮದಲ್ಲಿ ತಮ್ಮ ಬದುಕಿನ ಬಹುಭಾಗ ಸವೆಸಿದ ಅಕ್ಕಯ್ಯಮ್ಮನವರು ಮುಂದಿನ ಕೆಲವು ವರ್ಷಗಳ ಅವಧಿಯಲ್ಲಿ ತಮ್ಮ ಮೂವರು ಮಕ್ಕಳ ಮನೆಗಳಲ್ಲಿ ಮೊಮ್ಮಕ್ಕಳ ಆಟಪಾಟಗಳನ್ನು ನೋಡಿ ಸಂತೋಷಿಸುತ್ತ ಕಾಲಯಾಪನೆ ಮಾಡಿದರು. ನಾರಾಯಣ ಶಾಸ್ತ್ರಿ ಹುಬ್ಬಳ್ಳಿಯಲ್ಲೂ ಕೃಷ್ಣಮೂರ್ತಿ ಶಿವಮೊಗ್ಗದಲ್ಲೂ ಇದ್ದರು. ಮಗಳು ನಾಗರತ್ನ ಮತ್ತು ಆಕೆಯ ಪತಿ ಉದ್ಯೋಗನಿಮಿತ್ತ ಬೇರೆ ಬೇರೆ ನಗರಗಳಲ್ಲಿ ಹೋಗಿರಬೇಕಾಗಿತ್ತು. ನಾಗರತ್ನ ಊಟಿಯಲ್ಲಿ ಇದ್ದಾಗ ಅಕ್ಕಯ್ಯಮ್ಮನವರು ಅಲ್ಲಿಗೆ ಹೋಗಿ ಮಗಳೊಡನೆ ಇದ್ದುಬಂದರು.

ಅಕ್ಕಯ್ಯಮ್ಮ ಶಾಸ್ತ್ರಿಯವರ ಕೈಹಿಡಿದು ಮೈಸೂರಿಗೆ ಬಂದಾಗಿನಿಂದ ಆಕೆಯ ಸುಖದುಃಖಗಳಲ್ಲಿ ಗೆಳತಿಯಾಗಿದ್ದವಳು ಅಚ್ಚಮ್ಮಕ್ಕ. ಆಕೆಯ ನಿಜ ನಾಮಧೇಯ ಲಕ್ಷ್ಮೀನರಸಮ್ಮ. ನರಹರಿ ಶಾಸ್ತ್ರಿಗಳ ಅಣ್ಣ ಸುಬ್ಬರಾಮ ಶಾಸ್ತ್ರಿಗಳ ಮಗಳು. ತನ್ನ ಪತಿ ಉದ್ಯೋಗನಿಮಿತ್ತ ಪರವೂರುಗಳಲ್ಲಿರುತ್ತಿದ್ದುದರಿಂದ ಅಚ್ಚಮ್ಮಕ್ಕ ಮೈಸೂರಿನಲ್ಲೇ ಶಾಸ್ತ್ರಿ ಬಳಗದ ಅವಿಭಕ್ತ ಕುಟುಂಬದಲ್ಲಿ ತನ್ನ ಮಕ್ಕಳೊಡನೆ ಇರುತ್ತಿದ್ದರು. ನಾರಾಯಣ ಶಾಸ್ತ್ರಿಯ ಜೊತೆಗೆ ವಿದ್ಯಾಭ್ಯಾಸ ಮಾಡುತ್ತಿದ್ದ ಸುಂದರಮೂರ್ತಿ, ರಾಮಮೂರ್ತಿ ಅಚ್ಚಮ್ಮಕ್ಕನ ಮಕ್ಕಳು. ಲೀಲಾ, ಕರುಣಾ ಹೆಣ್ಣುಮಕ್ಕಳು.

ಅವಿಭಕ್ತ ಸಂಸಾರ ವಿವಿಧೆಡೆಗೆ ಹರಡಿ ಹಂಚಿಹೋದಮೇಲೂ ಅಚ್ಚಮ್ಮಕ್ಕ ಮತ್ತು ಆಕೆಯ ಹೆಣ್ಣುಮಕ್ಕಳು ಮೈಸೂರಿನಲ್ಲೇ ಉಳಿದಿದ್ದರು. ಅಕ್ಕಯ್ಯಮ್ಮ ಅವರ ಮನೆಗೆ ಬಂದಿದ್ದ ಒಂದು ಸಂದರ್ಭದಲ್ಲಿ ರಾಮಮೂರ್ತಿಯ ಅತ್ತೆ ತೀರಿಹೋದ ವರ್ತಮಾನ ಬಂದಿತ್ತು. ರಾಮಮೂರ್ತಿ ಮನೆಗೆ ಹಿಂತಿರುಗಿ ಬಂದಾಗ ಅವರಿಗೆ ಉಪ್ಪಿಟ್ಟು ಮಾಡಿಕೊಟ್ಟ ಅಕ್ಕಯ್ಯಮ್ಮ ಆತನ ಅತ್ತೆಯವರ ಸಾವಿನ ಸಂದರ್ಭದ ವಿವರಗಳನ್ನು ಕೇಳಿ ತಿಳಿದುಕೊಂಡರು.

ಪುಟ 5 ರಲ್ಲಿ ಮುಂದುವರೆದಿದೆ



# ಭಾರತೀಯ ಜನತಾಪಕ್ಷಕ್ಕೆ ದಕ್ಷಿಣದ ಹೆಬ್ಬಾಗಿಲು ತೆರೆದ ಅನಂತಕುಮಾರ್

ಪುಟ 1 ರಿಂದ ಆ ಸಂದರ್ಭದಲ್ಲಿ ರಾಜೀವ ಗಾಂಧಿಯವರ ಅಕಾಲಿಕ ನಿಧನವಾಗದೆ ಇದ್ದಿದ್ದರೆ ನಾಲ್ಕಕ್ಕಿಂತ ಹೆಚ್ಚು ಲೋಕಸಭಾ ಸ್ಥಾನಗಳು ದೊರೆಯುತ್ತಿದ್ದವು ಎಂದು ಅನಂತಕುಮಾರ್ ಹೇಳುತ್ತಿದ್ದರು. 1994ರ ವಿಧಾನಸಭೆಯಲ್ಲಿ ಬಿಜೆಪಿ 40 ಸ್ಥಾನಗಳನ್ನುಗೆದ್ದು ಶೇಕಡಾ 16.99 ಮತಗಳನ್ನು ಪಡೆಯಿತು. 1996 ರಲ್ಲಿ ಮೊದಲ ಬಾರಿ ಅನಂತಕುಮಾರ್ ಲೋಕಸಭೆಗೆ ಆಯ್ಕೆಯಾದರು. 1999 ರಲ್ಲಿ ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿದ್ದರೂ ಕರ್ನಾಟಕದಲ್ಲಿ ಪಕ್ಷದ ಒಳ ಜಗಳಗಳಿಂದಾಗಿ ಕೇವಲ 44 ಸ್ಥಾನಗಳನ್ನು ಗಳಿಸಲು ಶಕ್ತವಾಯಿತು. ಆಗ ಕೇವಲ 149 ಸ್ಥಾನಗಳಿಗಷ್ಟೇ ಸ್ಪರ್ಧಿಸಿದ್ದರಿಂದ ಶೇಕಡವಾರು ಮತಗಳಿಕೆ ವಿಶೇಷವಾಗಿ ಹೆಚ್ಚಲಿಲ್ಲ. ಈ ಚುನಾವಣೆಯಲ್ಲಿ ಸಂಯುಕ್ತ ಜನತಾದಳದ ಜೊತೆ ಚುನಾವಣಾ ಹೊಂದಾಣಿಕೆ ನಡೆದಿದ್ದರೂ ಯಡಿಯೂರಪ್ಪ ಹಾಗೂ ಜೆ. ಎಚ್ ಪಟೇಲ್ ಸೋತು ಹೋದರು. ಜಗದೀಶ್ ಶೆಟ್ಟರ್ ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕರಾದರು. ನಂತರದ ದಿನಗಳಲ್ಲಿ ಅನಂತಕುಮಾರ್ ಕೇಂದ್ರ ಮಂತ್ರಿಯಾಗಿ ಸತತ ಕೆಲಸಗಳಲ್ಲಿ ನಿರತರಾದರು. ಕೇಂದ್ರ ವಿಮಾನಯಾನ ಖಾತೆ, ಯುವಜನ ಸೇವೆ, ಕ್ರೀಡೆ ಮತ್ತು ಸಂಸ್ಕೃತಿ, ಪ್ರವಾಸೋದ್ಯಮ ಹಾಗೂ ನಗರಾಭಿವೃದ್ಧಿ ಇಲಾಖೆಗಳ ಸಚಿವರಾಗಿ ವಿವಿಧ ಖಾತೆಗಳನ್ನು ಯಶಸ್ವಿಯಾಗಿ ನಿಭಾಯಿಸಿದರು.

ಕರ್ನಾಟಕದ ಅಭಿವೃದ್ಧಿ, ನೆಲ, ಜಲ ಹಾಗೂ ಭಾಷೆಯ ವಿಷಯಗಳಲ್ಲಿ ಸ್ಪಷ್ಟ ನಿಲುವು ಹೊಂದಿದ್ದರಿಂದ ಅನಂತಕುಮಾರ್ ಬಹುಬೇಗ ಜನಾನುರಾಗಕ್ಕೆ ಪಾತ್ರರಾದರು. ಬೆಂಗಳೂರಿಗೆ ಸುವರ್ಣ ಚತುಷ್ಪಥ ಹೆದ್ದಾರಿ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು ಮೆಟ್ರೋ, ಕಾವೇರಿ ನಾಲ್ಕನೇ ಹಂತದ ನೀರು ಪೂರೈಕೆ, ಆಲಮಟ್ಟಿ ಅಣೆಕಟ್ಟಿನ ಎತ್ತರ ಹೆಚ್ಚಿಸುವಿಕೆ, ಹಾಗೂ ಕಾವೇರಿ ನೀರಿನ ಸಮಸ್ಯೆಯನ್ನು ಬಗೆಹರಿಸುವಲ್ಲಿ ಅನಂತಕುಮಾರ್ ಯಶಸ್ವಿಯಾದರು. ಆಗ ಕಾಂಗ್ರೆಸ್ ಮುಖ್ಯಮಂತ್ರಿಯಾಗಿದ್ದ ಎಸ್. ಎಂ. ಕೃಷ್ಣರವರು ಅನಂತಕುಮಾರರ ದೆಹಲಿ ಮನೆಗೆ ಹೋಗಿ ಅಭಿನಂದಿಸಿ ಅವರನ್ನು ಕರ್ನಾಟಕದ ಆಪದ್ಬಾಂಧವ ಎಂದು ಕೊಂಡಾಡಿದರು. ಆದರೆ, ಕರ್ನಾಟಕದಲ್ಲಿ ಪಕ್ಷದ ಬೆಳವಣಿಗೆ ಕ್ಷೀಣವಾಗಿತ್ತು. ಒಳಜಗಳಗಳ ದೆಸೆಯಿಂದ ಬಿಜೆಪಿ ದುರ್ಬಲವಾಗಿತ್ತು. ಆಂತರಿಕ ಸಮೀಕ್ಷೆಯ ಪ್ರಕಾರ ಕರ್ನಾಟಕದ 15 ವಿಧಾನಸಭಾ ಕ್ಷೇತ್ರಗಳಲ್ಲಿ ಮಾತ್ರ ಆರಿಸಿ ಬರುವ ಸೂಚನೆಯಿತ್ತು; ಅಲ್ಲದೆ, ಅನೇಕ ಲೋಕಸಭಾ ಕ್ಷೇತ್ರಗಳು ಕೈ ತಪ್ಪುವ ಹಾದಿಯಲ್ಲಿವೆ ಎಂದೂ ಸಮೀಕ್ಷೆ ತಿಳಿಸಿತ್ತು. ಇದರಿಂದ ಚಿಂತಿತರಾದ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ವೆಂಕಯ್ಯ ನಾಯ್ಡು, ಮಹಾರಾಷ್ಟ್ರಕ್ಕೆ ಪ್ರಮೋದ್ ಮಹಾಜನ್, ರಾಜಸ್ಥಾನಕ್ಕೆ ಶ್ರೀಮತಿ ವಸುಂಧರಾ ರಾಜೇ ಹಾಗೂ ಕರ್ನಾಟಕಕ್ಕೆ ಅನಂತಕುಮಾರ್ ಅವರನ್ನು ನಿಯೋಜಿಸಿದರು. ಈ ಮೂವರೂ ಕೇಂದ್ರ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ರಾಜ್ಯ ರಾಜಕಾರಣಕ್ಕೆ ತೆರಳಿದರು. ಕರ್ನಾಟಕ ರಾಜ್ಯ ಚುನಾವಣೆಗಳಲ್ಲಿ ಪಕ್ಷದ ಸ್ಥಾನವನ್ನು ಬಲಪಡಿಸುವ ಉದ್ದೇಶದಿಂದ ಕೇಂದ್ರ ಸಚಿವ ಸ್ಥಾನವನ್ನು ತೊರೆಯಲು ಅನಂತಕುಮಾರ್ ಸ್ವಲ್ಪವೂ ಹಿಂಜರಿಯಲಿಲ್ಲ.

2003ರಲ್ಲಿ ಕರ್ನಾಟಕ ಬಿಜೆಪಿ ಅಧ್ಯಕ್ಷರಾಗಿ ಅವರು ಪಕ್ಷದ ಬಲವರ್ಧನೆಯಲ್ಲಿ ನಿರತರಾದರು. ಅವರ ಅಸಾಧಾರಣ ಸಂಘಟನಾ ಚಾತುರ್ಯ, ಚುನಾವಣಾ ತಂತ್ರ, ವ್ಯೂಹರಚನಾ ಕೌಶಲ, ರಾಜಕೀಯ ಸಾಮರ್ಥ್ಯ ಮತ್ತು ನಿರಂತರ ಪರಿಶ್ರಮಗಳಿಂದಾಗಿ ಕರ್ನಾಟಕದಲ್ಲಿ ಬಿಜೆಪಿಯ ಬೆಳವಣಿಗೆ ಸಾಧ್ಯವಾಯಿತು. ಮುಂದಿನ ಹತ್ತು ತಿಂಗಳ ಕಾಲ ನಿರಂತರ ಪ್ರವಾಸ ಮಾಡಿದ ಅನಂತಕುಮಾರ್ ಪಕ್ಷವನ್ನು ಬಲಗೊಳಿಸತೊಡಗಿದರು. ಪಕ್ಷವು ಕೇವಲ ಒಂದು ಸಮುದಾಯದ ಪ್ರತಿನಿಧಿಯಾಗದೆ ಸರ್ವಸಮುದಾಯಗಳಿಂದ ಬೆಂಬಲ ಪಡೆಯುವ ಪಕ್ಷವಾಗಬೇಕು ಎಂಬ ಸ್ಪಷ್ಟತೆ ಹೊಂದಿದ್ದ ಅನಂತಕುಮಾರ್ ವಿವಿಧ ಶೋಷಿತ ಸಮುದಾಯಗಳ ನಾಯಕರನ್ನು ಪಕ್ಷಕ್ಕೆ ಕರೆತಂದರು. ಶ್ರೀ ಗೋವಿಂದ ಕಾರಜೋಳ, ಎಸ್. ಬಂಗಾರಪ್ಪ, ಕೆ. ಬಿ. ಶಾಣಪ್ಪ, ರಮೇಶ್ ಜಿಗಜಿಣಗಿ, ರಾಜಶೇಖರ ಮೂರ್ತಿ, ಕುಮಾರ್ ಬಂಗಾರಪ್ಪ, ಸಿ ಸಿ ಪಾಟೀಲ್, ಲಕ್ಷ್ಮಣ ಸವದಿ, ಎ ರವೀಂದ್ರ, ಸಿ. ಎಂ. ಉದಾಸಿ, ಹೀಗೆ ಅನೇಕ ನಾಯಕರು ಬಿಜೆಪಿ ಸೇರಿದರು. 2004ರ ಚುನಾವಣೆ ಫಲಿತಾಂಶ ಹೊರ ಬಂದಾಗ ಬಿಜೆಪಿ ತನ್ನ 79 ಶಾಸಕರೊಡನೆ ಜನತಾದಳದ ಐವರು ಶಾಸಕರು ಸೇರಿ ಒಟ್ಟು 84 ಶಾಸಕರನ್ನು ಹೊಂದಿದ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಆ ಚುನಾವಣೆಯಲ್ಲಿ ಒಟ್ಟಾರೆ ಮತಗಳಿಕೆಯಲ್ಲಿ ಶೇ. 28.33 ಮತ ಪಡೆಯುವಲ್ಲಿ ಯಶಸ್ವಿಯಾಯಿತು. ಕಾಂಗ್ರೆಸ್ ಹೀನಾಯವಾಗಿ ಸೋಲು ಕಂಡಿತು. ಅಲ್ಲಿಯವರೆಗೆ ಬಿಜೆಪಿಯನ್ನು ಆಡಳಿತ ನಡೆಸಲಾಗದ ಒಂದು fringe ಪಾರ್ಟಿ ಎಂದು ಭಾವಿಸುತ್ತಿದ್ದ ಜನರಿಗೆ ಇದೀಗ ಬಿಜೆಪಿ ಒಂದು ಸರ್ಕಾರ ಮಾಡಬಲ್ಲ ಸಮರ್ಥ ಪಕ್ಷ ಎಂಬ ವಿಶ್ವಾಸ ಮೂಡಿತು. ಮತದಾರರ ಈ ಭಾವನೆಯ ಪರಿಣಾಮವಾಗಿ, 2008ರಲ್ಲಿ ಬಿಜೆಪಿ 110 ಸ್ಥಾನ ಗೆಲ್ಲುವಂತಾಯಿತು. ಈ ಸಂದರ್ಭದಲ್ಲಿಯೂ ಶ್ರೀ ಪ್ರಭಾಕರ್ ಕೋರೆ (2008) ಮತ್ತು ಉಮೇಶ್ ಕತ್ತಿ (2006) ಮುಂತಾದ ಪ್ರಭಾವಿಗಳನ್ನು ಅನಂತಕುಮಾರ್ ಪಕ್ಷಕ್ಕೆ ಸೆಳೆದಿದ್ದರು.

2013ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ರಾಜ್ಯಮಟ್ಟದಲ್ಲಿ ದೊಡ್ಡ ಆಘಾತವನ್ನೇ ಎದುರಿಸಬೇಕಾಗಿ ಬಂದಿತು. ಪಕ್ಷ 1994ರಲ್ಲಿ ಇದ್ದ ಹೀನಾಯಸ್ಥಿತಿಗೆ ಹಿನ್ನಡೆ ಕಾಣುವಂತಾಯಿತು. ಆಡಳಿತ ಪಕ್ಷವಾಗಿ ಮೂವರು ಮುಖ್ಯಮಂತ್ರಿಗಳ ಬದಲಾವಣೆಯಾದುದರ ಜೊತೆಗೆ, ಶ್ರೀ ಯಡಿಯೂರಪ್ಪನವರು ಭ್ರಷ್ಟಾಚಾರದ ಆರೋಪ ಎದುರಿಸಬೇಕಾಗಿ ಬಂದಿತು. ಯಡಿಯೂರಪ್ಪನವರು ಪಕ್ಷ ತೊರೆದು ಕೆಜೆಪಿ ಪಕ್ಷ ಕಟ್ಟಿದರು; ಅವರೊಡನೆ ಸೇರಲು ಹಲವು ಪ್ರಮುಖ ನಾಯಕರು ಬಿಜೆಪಿ ತೊರೆದು ಹೋದರು. ಬಿಜೆಪಿಗೆ ಎದುರಾಳಿಯಾಗಿ ಸ್ಪರ್ಧಿಸಿದ ಕೆಜೆಪಿ ಶೇ. ಒಂಬತ್ತರಷ್ಟು ಮತಗಳನ್ನು ಸೆಳೆದುಕೊಂಡು ಬಿಜೆಪಿಯ ಶಕ್ತಿಯನ್ನು ಕುಗ್ಗಿಸಿತು. ಇನ್ನೊಂದೆಡೆ ಶ್ರೀರಾಮುಲು, ಜನಾರ್ದನ ರೆಡ್ಡಿಯವರ ಗುಂಪು ಬಿಎಸ್ಆರ್ ಪಕ್ಷ ಕಟ್ಟಿತು. ಜನಾರ್ದನ ರೆಡ್ಡಿಯವರ ಗಣಿ ಹಗರಣವೂ ಭಾಜಪದ ಯಶಸ್ಸನ್ನು ಕುಗ್ಗಿಸಿತ್ತು. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿ ಎದೆಗುಂದದೆ ಅನಂತಕುಮಾರರೂ ಪಕ್ಷದ ಹಿರಿಯ ಮುಖಂಡರೂ ಪಕ್ಷವನ್ನು ಮುನ್ನೆಲೆಗೆ ತರಲು ಶ್ರಮಿಸಿದರು. ಪಕ್ಷ ತೊರೆದು ಹೋದವರನ್ನೆಲ್ಲ ಮರಳಿ ಪಕ್ಷದ ತೆಕ್ಕೆಗೆ ಕರೆತಂದರು. ಇದರಿಂದ 2014ರ ಲೋಕಸಭಾ ಚುನಾವಣೆಯಲ್ಲಿ ಅತ್ಯಧಿಕ ಸ್ಥಾನ ಗಳಿಸುವ ಮೂಲಕ ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಯಾಗಿ ಸರಕಾರ ರಚಿಸಲು ಅತಿದೊಡ್ಡ ಕೊಡುಗೆ ನೀಡಿದಂತಾಯಿತು. 1989ರಿಂದಲೇ ಕರ್ನಾಟಕ, ಬಿಹಾರ ಸೇರಿದಂತೆ ಹಲವು ಚುನಾವಣೆಗಳಲ್ಲಿ ಸಕ್ರಿಯವಾಗಿ ಪಾತ್ರವಹಿಸಿದ್ದ ಅನಂತಕುಮಾರ್ ಮೊದಲ ಬಾರಿಗೆ 1996ರಲ್ಲಿ ಸ್ಪರ್ಧಿಯಾಗಿ ಭಾಗವಹಿಸಿದರು. ಬೆಂಗಳೂರು ನಗರದಿಂದ ಸತತವಾಗಿ ಆರು ಬಾರಿ ಸಂಸದರಾಗಿ ಆಯ್ಕೆಯಾಗಿ ಗೆಲುವಿನ ಪತಾಕೆ ಹಾರಿಸಿದುದು ಯಾವುದೇ ಮಹಾನಗರದ ರಾಜಕೀಯ ಇತಿಹಾಸದಲ್ಲಿ ಒಂದು ದಾಖಲೆ. ಅಲ್ಲದೆ, 2004ರಿಂದ 2014ರವರೆಗೆ ಪಕ್ಷದ ಚುನಾವಣಾ ಸಮಿತಿಯ ಕಾರ್ಯದರ್ಶಿಯಾಗಿ ಅನೇಕ ರಾಜ್ಯಗಳ ಚುನಾವಣೆಯನ್ನು ಯಶಸ್ವಿಯಾಗಿ ನಿರ್ವಹಿಸಿ ಪಕ್ಷದ ಯಶೋಪತಾಕೆಯನ್ನು ಎತ್ತಿಹಿಡಿದುದು ಅನಂತಕುಮಾರರ ಸಮರ್ಥಕಾರ್ಯಕೌಶಲಕ್ಕೆ ನಿದರ್ಶನವಾಗಿದೆ.

2023ರ ವಿಧಾನ ಚುನಾವಣೆಯ ಪ್ರಕ್ರಿಯೆ ಇದೀಗ ಜಾರಿಯಲ್ಲಿದೆ. ದಿನನಿತ್ಯದ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಕಾರ್ಯಕರ್ತರಿಗೂ, ಮತದಾರರಿಗೂ, ನಾಯಕರಿಗೂ ಅನಂತಕುಮಾರರ ಅನುಪಸ್ಥಿತಿಯ ಪರಿಣಾಮ ನಿಚ್ಚಳವಾಗಿ ಗೋಚರಿಸುತ್ತಿದೆ.

## ಟ್ವಿಟರ್ ಕಲರವ



**1989** ಫೆಬ್ರವರಿ 15ರಲ್ಲಿ ಅನಂತಕುಮಾರ್ ಮತ್ತು ತೇಜಸ್ವಿನಿಯವರ ಮದುವೆಯಾಗಿದ್ದು. ಹುಬ್ಬಳ್ಳಿಯಲ್ಲಿ ಮದುವೆಯ ಕಾರ್ಯಕ್ರಮಗಳನ್ನು ಮುಗಿಸಿ ಬೆಂಗಳೂರಿಗೆ ಹಿಂತಿರುಗಿ ಬಂದು ಶ್ರೀ ಯಡಿಯೂರಪ್ಪನವರನ್ನು ಭೇಟಿಯಾದಾಗ "ಮದುವೆಯ ನಂತರ ಇಷ್ಟು ಬೇಗ ಪ್ರವಾಸಕ್ಕೆ ಹೋಗಿ ಬಂದಿರಾ" ಎಂದು ಪ್ರಶ್ನೆ ಕೇಳಿದರು. ಅನಂತಕುಮಾರ್ ಉತ್ತರಿಸುವ ಮುನ್ನ ಶ್ರೀ ಯಡಿಯೂರಪ್ಪನವರೇ "ಬನ್ನಿ ನಾವೆಲ್ಲರೂ ಸೇರಿ ಒಟ್ಟಿಗೆ ಹೋಗೋಣ" ಎಂದು ತಾವೇ ಪ್ರವಾಸವನ್ನು ನಿಶ್ಚಯಿಸಿದರು. ಶಿರಾಳಕೊಪ್ಪದ ಬಿಜೆಪಿಯ ಹಿರಿಯ ನಾಯಕರಾದ ಶ್ರೀ ಪದ್ಮನಾಭ್ ಭಟ್, ಅವರ ಶ್ರೀಮತಿ ಸರೋಜಮ್ಮ, ಶ್ರೀ ಬಿ. ಎಸ್. ಯಡಿಯೂರಪ್ಪ ಮತ್ತು ಅವರ ಪತ್ನಿ ಶ್ರೀಮತಿ ಮೈತ್ರಾದೇವಿ ಹಾಗೂ ಅನಂತಕುಮಾರ್ ದಂಪತಿಗಳು ಎಲ್ಲ ಸೇರಿ ಮೈಸೂರು, ಊಟಿ, ರಾಮೇಶ್ವರ, ಕನ್ಯಾಕುಮಾರಿ ಪ್ರವಾಸಕ್ಕೆ ಶ್ರೀ ಯಡಿಯೂರಪ್ಪ ಅವರ ಅಂಬಾಸಿಡರ್ ಕಾರಿನಲ್ಲಿ ಹೋಗಿದ್ದರು. ಈ ಪ್ರವಾಸವು ಯಡಿಯೂರಪ್ಪ-ಅನಂತಕುಮಾರರ ಕುಟುಂಬದ ಮೈತ್ರಿಗೆ ಸಾಕ್ಷಿಯಾಗಿತ್ತು.

## ಸರಳ ಯೋಗಾಭ್ಯಾಸ

ಎಸ್. ರಾಘವೇಂದ್ರ ಪ್ರಸಾದ್
ಅಧ್ಯಕ್ಷರು - ಸಹಬಾಳ್ವೆ

### ವೀರಭದ್ರಾಸನ (Warrior Pose)



**ವೀರಭದ್ರಾಸನ ಪೌರಾಣಿಕ ಯೋಧನ ಸಾಹಸಗಳನ್ನು ಗೌರವಿಸುವ ಆಸನವಾಗಿದೆ. ಆದ್ದರಿಂದ ಇದನ್ನು ಯೋಧ ಭಂಗಿ (ವಾರಿಯರ್ ಪೋಸ್) ಎಂದೂ ಕರೆಯುತ್ತಾರೆ. ಈ ಭಂಗಿಯ ಅರ್ಥ: ವೀರ - ಸಾಹಸ/ಪರಾಕ್ರಮ; ಭದ್ರ- ಉತ್ತಮವಾದ/ ಸುರಕ್ಷಿತ; ಆಸನ- ಭಂಗಿ**

**ಆಸನ ಮಾಡುವ ರೀತಿ:** 1) ಮೊದಲು ನೇರವಾಗಿ ಸಮಸ್ಥಿತಿಯಲ್ಲಿ ನಿಲ್ಲುವುದು. 2) ಕಾಲುಗಳನ್ನು 3 ರಿಂದ 4 ಅಡಿಯಷ್ಟು ಅಗಲಿಸಿ ನೇರವಾಗಿ ನಿಂತುಕೊಳ್ಳಿರಿ. 3) ಬಲ ಪಾದವನ್ನು 90 deg. ಹೊರಗಡೆಗೆ ತಿರುಗಿಸಿ ಹಾಗೂ ನಿಮ್ಮ ಎಡ ಪಾದವನ್ನು 15 deg. ತಿರುಗಿಸಿ 4) ಎರಡೂ ತೋಳುಗಳನ್ನು ಭುಜದವರೆಗೂ ತಂದು ವಿಸ್ತರಿಸಿ. ಕೈಗಳು ಮೇಲ್ಭಾಗಕ್ಕೆ ತೋರುವಂತೆ ಇಡತಕ್ಕದ್ದು ಹಾಗೂ ಕೈಗಳನ್ನು ಭೂಮಿಗೆ ಸಮಾನಾಂತರ ಇಟ್ಟುಕೊಳ್ಳಬೇಕು. 5) ಉಸಿರನ್ನು ಬಿಡುತ್ತಾ ಬಲ ಮಂಡಿಯನ್ನು ಬಾಗಿಸಿ. ತಲೆಯನ್ನು ನಿಮ್ಮ ಬಲಕ್ಕೆ ತಿರುಗಿಸಿ ನೋಡಿರಿ. 6) 20 - 30 ಸೆಕೆಂಡುಗಳು ಅಥವಾ ಆದಷ್ಟು ಸಮಯ ಸಾಮಾನ್ಯ ಉಸಿರಾಟದ ಭಂಗಿಯಲ್ಲಿ ಇರತಕ್ಕದ್ದು. ಉಸಿರು ತೆಗೆದುಕೊಳ್ಳುತ್ತ ಮೇಲೆ ಬರತಕ್ಕದ್ದು. ನಂತರ ಸಮಸ್ಥಿತಿಯಲ್ಲಿ ಕೊಂಚ ವಿಶ್ರಮಿಸಿ. 7) ಈ ರೀತಿ ಎಡ ಬದಿಯಲ್ಲೂ ಪುನರಾವರ್ತಿಸಿ.

**ಆಸನದ ಪ್ರಯೋಜನಗಳು:** 1) ಭುಜದ ಶಕ್ತಿ ವರ್ಧಿಸುತ್ತದೆ ಹಾಗೂ ಭುಜದ ಒತ್ತಡವನ್ನು ಕಡಿಮೆ ಮಾಡಲು ಸಹಾಯಕ 2) ತೋಳುಗಳು, ಕಾಲುಗಳು ಮತ್ತು ಕೆಳಸೊಂಟವನ್ನು ಗಟ್ಟಿಯಾಗಿರಿಸುತ್ತದೆ. 3) ದೇಹದ ಸಮತೋಲನಕ್ಕೆ ಸಹಾಯ ಮಾಡುತ್ತದೆ 4) ಡೆಸ್ಕ್ ಅಥವಾ ಕುಳಿತು ಕೆಲಸ ಮಾಡುವವರಿಗೆ ಇದು ಉತ್ತಮ ಆಸನವಾಗಿದೆ. ಬೆನ್ನುಮೂಳೆಯನ್ನು ಪುನಃಸ್ಥಾಪಿಸುತ್ತದೆ. 5) ಆಸನವು ಮನಸ್ಸು ಮತ್ತು ದೇಹಕ್ಕೆ ವಿಶ್ರಾಂತಿ ನೀಡುತ್ತದೆ, ಶಾಂತಿ, ಧೈರ್ಯ, ಅನುಗ್ರಹ, ಮತ್ತು ಮಂಗಳಕರ ಭಾವವನ್ನು ಹರಡುತ್ತದೆ.

**ಎಚ್ಚರಿಕೆ ವಹಿಸಬೇಕಾದವರು:** 1) ನೀವು ಈ ಆಸನವನ್ನು ಅಭ್ಯಾಸ ಮಾಡುವ ಮೊದಲು ವೈದ್ಯರನ್ನು ಸಂಪರ್ಕಿಸುವುದು ಮುಖ್ಯ, ವಿಶೇಷವಾಗಿ ನೀವು ಬೆನ್ನುಮೂಳೆಯ ಸಮಸ್ಯೆಗಳನ್ನು ಹೊಂದಿದ್ದರೆ ಅಥವಾ ದೀರ್ಘಕಾಲದ ಅನಾರೋಗ್ಯದಿಂದ ಚೇತರಿಸಿಕೊಂಡಿದ್ದರೆ. 2) ಹೆಚ್ಚಿನ ರಕ್ತದೊತ್ತಡ ಹಾಗೂ ಹೃದಯದ ತೊಂದರೆಯಿಂದ ಬಳಲುತ್ತಿರುವವರು ಈ ಆಸನವನ್ನು ಮಾಡಬಾರದು. 3) ನೀವು ಮೊಣಕಾಲು ನೋವಿನಿಂದ ಬಳಲುತ್ತಿದ್ದರೆ ಅಥವಾ ಸಂಧಿವಾತವನ್ನು ಹೊಂದಿದ್ದರೆ, ಈ ಆಸನವನ್ನು ಮಾಡಲು ಗೋಡೆಯ ಬೆಂಬಲವನ್ನು ಬಳಸಬಹುದು ಮತ್ತು ತಜ್ಞರ ಸಮ್ಮುಖದಲ್ಲಿ ಮಾಡತಕ್ಕದ್ದು. 4) ಗರ್ಭಿಣಿಯರು ಮೊದಲು ಯೋಗವನ್ನು ಅಭ್ಯಾಸ ಮಾಡುತ್ತಿದ್ದರೆ ತರಬೇತುದಾರರ ಮಾರ್ಗದರ್ಶನದಲ್ಲಿ ಮತ್ತು ವೈದ್ಯರ ಅನುಮತಿಯೊಂದಿಗೆ ಮಾಡಬೇಕು.

ಪುಟ 3 ರಿಂದ

## ಸಾರ್ಥಕ ಬದುಕಿನ ಅಂತ್ಯ

ಹೃದಯಾಘಾತವಾಗಿ ಆಕೆ ನರಳಾಟವಿಲ್ಲದೆ ಮರಣಹೊಂದಿದ ವಿಷಯವನ್ನು ರಾಮಮೂರ್ತಿ ವಿವರಿಸಿದರು. ಅದನ್ನು ಕೇಳಿ ಅಕ್ಕಯ್ಯಮ್ಮ ಅಲ್ಲಿದ್ದ ಲೀಲಾ, ಕರುಣಾ ಮೊದಲಾದವರೊಡನೆ, ನೋಡು ಇದು ಎಂತಹ ಪುಣ್ಯದ ಸಾವು! ಆ ಪುಣ್ಯಶಾಲಿಯ ಹಾಗೆಯೇ ನಾನೂ ನೆನೆಸಿಕೊಂಡ ಹಾಗೆಯೇ ಸತ್ತುಹೋಗುವಂತಾದರೆ ಎಷ್ಟು ಒಳ್ಳೆಯದು ಅಲ್ಲವಾ ಎಂದು ಹೇಳತೊಡಗಿದರು. ಲೀಲಾ ಅವರನ್ನು ಸಂತೈಸುತ್ತ ಇದೇಕೆ ಅತ್ತೆಮ್ಮ, ಇಂಥ ಮಾತನಾಡುತ್ತೀರಿ, ನೀವು ಚೆನ್ನಾಗಿರಬೇಕು ಎಂದು ಸಮಾಧಾನ ಹೇಳಿದರು. ಅಕ್ಕಯ್ಯಮ್ಮನವರು ಮಾತು ಬದಲಿಸಿ, ಏನೂ ಇಲ್ಲ ಕಣೇ, ಹಾಗೇ ಸುಮ್ಮನೇ ಏನೋ ಬೇಜಾರು ಆಯಿತು ಅದಕ್ಕೇ ಹಾಗೆ ಅಂದೆ ಬಿಡು ಎಂದವರೇ ದೇವರ ಗೂಡಿನತ್ತ ಹೋಗಿ ನಮಸ್ಕಾರ ಮಾಡಿದರು. ಬಗ್ಗಿ ಏಳುವಾಗ ಸ್ವಲ್ಪ ಕೆಮ್ಮು ಬಂತು ಅಷ್ಟೇ. ಯಾಕೋ ನನ್ನ ಕೈಯ್ಯಲ್ಲಿ ಆಗುತ್ತ ಇಲ್ಲ ಕಣೇ ಎಂದು ಆಯಾಸದಿಂದ ಹೇಳಿದರು. ಯಾಕೆ ಏನಾಯ್ತು ಅತ್ತೆಮ್ಮ, ನೀರು ಕೊಡಲಾ ಏನಾಗ್ತಾ ಇದೆ ಎಂದು ಸುತ್ತಲಿನವರು ಗಾಬರಿಯಿಂದ ಕೇಳುವಾಗ, ಇದು ಇನ್ನೇನೂ ಅಲ್ಲಮ್ಮ, ಇದು ಮರಣ ಸಂಕಟ ಅಮ್ಮ ಅಂತ ಹೇಳಿ ಕುಸಿದವರು ಮೇಲೇಳಲಿಲ್ಲ. ಅವರ ತಲೆಯನ್ನು ಲೀಲಾ ತನ್ನ ತೊಡೆಯ ಮೇಲಿರಿಸಿಕೊಳ್ಳುವಷ್ಟರಲ್ಲಿ ಅಕ್ಕಯ್ಯಮ್ಮ ತನ್ನಿಚ್ಛೆಯಂತೆ ಇಹಲೋಕವನ್ನು ತೊರೆದಾಗಿತ್ತು. ಆ ಹಿರಿಯ ಜೀವದ ಸಾರ್ಥಕ ಬದುಕು ಹೀಗೆ ಕೊನೆಗೊಂಡಿತು.

## ಗೀತೆಯ ಸಂದೇಶ

### ನಾಯಕನ ಜವಾಬ್ದಾರಿ

ಯದ್ ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ |
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ || ೩-೨೧ ||

ಶ್ರೇಷ್ಠಃ – ಉನ್ನತ ಸ್ಥಾನದಲ್ಲಿರುವವನು ಯದ್ ಯದ್ – ಯಾವುಯಾವುದನ್ನು ಆಚರತಿ - ಮಾಡುತ್ತಾನೋ ತತ್ ತತ್ ಏವ – ಅವುಗಳನ್ನೇ ಇತರೋ ಜನಃ – ಸಾಮಾನ್ಯ ಜನರು (ಅನುಸರಿಸುತ್ತಾರೆ). ಸಃ – ಆ ಶ್ರೇಷ್ಠ ವ್ಯಕ್ತಿಯು ಯತ್ - ಯಾವುದನ್ನು ಪ್ರಮಾಣಂ ಕುರುತೇ – ನಿದರ್ಶನವೆಂದು ಮಾಡಿ ತೋರಿಸುತ್ತಾನೋ ತತ್ - ಅದನ್ನು ಲೋಕಃ – ಜಗತ್ತು ಅನುವರ್ತತೇ – ಅನುಸರಿಸುತ್ತದೆ.

ಸಾಮಾನ್ಯ ಜನರು ಸಮಾಜದ ಹಿರಿಯ, ಶ್ರೇಷ್ಠ ವ್ಯಕ್ತಿಗಳ ಮೇಲ್ಪಂಕ್ತಿಯನ್ನು ಅನುಸರಿಸುತ್ತಾರೆ. ಅವರನ್ನು ತಮ್ಮ ಆದರ್ಶವೆಂದು ಭಾವಿಸುತ್ತಾರೆ. ಆದುದರಿಂದ ನಾಯಕತ್ವ ವಹಿಸುವವರು ತಮ್ಮ ನಡೆನುಡಿಗಳನ್ನು ಶುದ್ಧವಾಗಿರಿಸಿಕೊಳ್ಳಬೇಕು.

# ರಾಜಕಾರಣಕ್ಕೆ ಅನಂತ ಮಾನದಂಡ

**ಶ್ರೀ ಎಸ್. ಪ್ರಕಾಶ್,** ಭಾರತೀಯ ಜನತಾ ಪಕ್ಷದ ವಕ್ತಾರರು ಹಾಗೂ ಲೇಖಕರು

ಅನಂತಕುಮಾರ್ ಎಂದರೆ ಮೊದಲು ನೆನಪಾಗುವುದು 1990ನೇ ಇಸವಿಯ ಒಂದು ಪ್ರಕರಣ. ರಾಮಮಂದಿರ ಚಳವಳಿಯ ಸಂದರ್ಭ. ಮುಲಾಯಂ ಸಿಂಗ್ ಯಾದವ್ ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿದ್ದರು. ಅಯೋಧ್ಯೆಯಲ್ಲಿ ಕರಸೇವಕರ ಮೇಲೆ ಮುಲಾಯಂ ಸರಕಾರ ಗುಂಡಿನ ಮಳೆ ಸುರಿಸಿತು. ನೂರಾರು ಪ್ರಾಣಗಳು ಆಹುತಿಯಾದವು. ಈ ಬರ್ಬರ ಕ್ರಮವನ್ನು ವಿರೋಧಿಸಿ ಇಡೀ ದೇಶದಲ್ಲಿ ಪ್ರತಿಭಟನೆ ನಡೆಯಿತು. ಬೆಂಗಳೂರಿನಲ್ಲಿಯೂ ಕಬ್ಬನ್ ಪಾರ್ಕ್ ಸೆಂಟ್ರಲ್ ಲೈಬ್ರೆರಿ ಹಿಂಭಾಗದಲ್ಲಿ ದೊಡ್ಡ ಮಟ್ಟದ ಧರಣಿ ನಡೆಯಿತು. ಅಲ್ಲಿಯೇ, ಅನಂತಕುಮಾರರನ್ನು ನಾನು ಮೊದಲ ಬಾರಿಗೆ ನೋಡಿದ್ದು. ಆಗ ಅವರು ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಅನಂತಕುಮಾರ್ ಮತ್ತು ಯಡಿಯೂರಪ್ಪ, ಇಬ್ಬರೂ ಜೋಡೆತ್ತುಗಳಂತೆ ಬಿಜೆಪಿಯಲ್ಲಿ ಅವಿರತವಾಗಿ ಶ್ರಮಿಸುತ್ತಿದ್ದ ಕಾಲವದು.




**ಬಿಜೆಪಿ ವಕ್ತಾರ ಶ್ರೀ ಎಸ್.ಪ್ರಕಾಶ್ ಅವರು ಅನಂತಪಥ ಮಾಸಪತ್ರಿಕೆಯ 33ನೇ ಸಂಚಿಕೆಯನ್ನು ಬಿಡುಗಡೆ ಮಾಡಿದರು**

1991ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ನಾನು ರಾಜಕೀಯಕ್ಕೆ ಅಧಿಕೃತವಾಗಿ ಪ್ರವೇಶ ಮಾಡಿದೆ. ಆ ಚುನಾವಣೆಯಲ್ಲಿ ಮೈಸೂರಿನಿಂದ ಮಹಾರಾಜ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪಕ್ಷದ ಪರವಾಗಿ ಸ್ಪರ್ಧಿಸಿದ್ದರು. ಅವರ ಗೆಲುವಿಗಾಗಿ ಅನಂತಕುಮಾರ್ ನೇತೃತ್ವದಲ್ಲಿ ನಾವೆಲ್ಲರೂ ಪ್ರಚಾರದಲ್ಲಿ ತೊಡಗಿಕೊಂಡಿದ್ದೆವು. ಚುನಾವಣೆ ಮುಗಿದ ನಂತರ ನಡೆದ ಸಭೆಯಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡ ಅನಂತಕುಮಾರರ ಮಾತುಗಳು ಇಂದಿಗೂ ನನ್ನ ಕಿವಿಗಳಲ್ಲಿ ರಿಂಗಣಿಸುತ್ತಿವೆ. 1993ರಲ್ಲಿ ನಾನು ಯುವ ಮೋರ್ಚಾ ನಗರ ಪ್ರಧಾನ ಕಾರ್ಯದರ್ಶಿಯಾದೆ. ಆಗ ಅನಂತಕುಮಾರರು ನನ್ನನ್ನು ಬೆಂಬಲಿಸಿರದಿದ್ದರೆ ನಾನು ಪ್ರಧಾನ ಕಾರ್ಯದರ್ಶಿ ಆಗುತ್ತಿರಲಿಲ್ಲ. ಆ ಸಮಯದಲ್ಲಿ ಮಾಧ್ಯಮ ಮತ್ತು ರಾಜಕೀಯ ನನ್ನ ಆಸಕ್ತಿಯ ವಿಷಯಗಳಾಗಿದ್ದವು. 1995ರಲ್ಲಿ ಶ್ರೀಮತಿ ಸುಷ್ಮಾ ಸ್ವರಾಜ್ ಬಿಜೆಪಿಯ ರಾಷ್ಟ್ರೀಯ ವಕ್ತಾರೆಯಾಗಿದ್ದರು. ಪಕ್ಷದ ಮುಖವಾಣಿಯಾಗಿ ಮಹಿಳೆಯೊಬ್ಬರನ್ನು ನೇಮಿಸಿದ ಮೊದಲ ಪಕ್ಷ ಬಿಜೆಪಿ. ಆಗ ಅವರು ಪಾರ್ಲಿಮೆಂಟ್ ಅನೆಕ್ಸ್ ಕಟ್ಟಡದಲ್ಲಿ ಮಾಧ್ಯಮ ಕಾರ್ಯಾಗಾರವೊಂದನ್ನು ಏರ್ಪಡಿಸಿದ್ದರು. ನಾನು ಆಯ್ಕೆಯಾಗಿರಲಿಲ್ಲ. ನಿರಾಶನಾದ ನಾನು ತಡರಾತ್ರಿ ಅನಂತಕುಮಾರರಿಗೆ ಕರೆ ಮಾಡಿ ಕಾರ್ಯಾಗಾರಕ್ಕೆ ಹೋಗುವ ನನ್ನ ಇಚ್ಛೆಯನ್ನು ವ್ಯಕ್ತಪಡಿಸಿದೆ. ತತ್‌ಕ್ಷಣ ಕಾರ್ಯಪ್ರವೃತ್ತರಾದ ಅವರು ಹುಬ್ಬಳ್ಳಿಯಲ್ಲಿದ್ದ, ರಾಜೇಂದ್ರ ಗೋಖಲೆಯವರಿಗೆ ಕರೆ ಮಾಡಿ ನನ್ನನ್ನು ಕರೆದುಕೊಂಡು ಹೋಗಲೇಬೇಕು ಎಂದು ತಿಳಿಸಿ ದೆಹಲಿಗೆ ತೆರಳಲು ಎಲ್ಲ ವ್ಯವಸ್ಥೆಗಳನ್ನೂ ಮಾಡಿಕೊಟ್ಟಿದ್ದರು. ಅನಂತಕುಮಾರರ ಸಹಾಯದಿಂದ ಮಾಧ್ಯಮ ವಿಭಾಗಕ್ಕೆ ಬಂದ ನಾನು, ಅಂದಿನಿಂದ ಇಂದಿನ ವರೆಗೂ ಇದೇ ವಿಭಾಗದಲ್ಲಿ ಮುಂದುವರೆಯುತ್ತಿದ್ದೇನೆ.

1996ರ ಲೋಕಸಭಾ ಚುನಾವಣೆಯಲ್ಲಿ ಅನಂತಕುಮಾರ್ ಸ್ಪರ್ಧಿಸಿದರು. ಚುನಾವಣೆ ಪ್ರಚಾರದ ಸಮಯದಲ್ಲಿ ಕರಪತ್ರಗಳ ವಿನ್ಯಾಸ ಮತ್ತು ಮುದ್ರಣ ಸೇರಿದಂತೆ ಬೇರೆ ಬೇರೆ ಕೆಲಸಗಳನ್ನು ನಾನು ಮಾಡುತ್ತಿದ್ದೆ. ಅದು ನನಗೆ ಚುನಾವಣೆಯಲ್ಲಿ ಮಾಧ್ಯಮಗಳ ನಿರ್ವಹಣೆ ಮಾಡಿದ ಮೊದಲ ಅನುಭವ. ಅಲ್ಲಿಂದ ಮುಂದೆ ಎಲ್ಲ ಚುನಾವಣೆಗಳಲ್ಲಿ ಕ್ಷೇತ್ರವಾರು ಕೆಲಸ ಮಾಡುತ್ತಿದ್ದೆ.

ಅನಂತಕುಮಾರರು ಬಿಜೆಪಿಯನ್ನು ಹೇಗೆ ಬೆಳೆಸಬೇಕು, ಯಾರಿದ್ದರೆ ಪಕ್ಷಕ್ಕೆ ಒಳ್ಳೆಯದು ಎಂಬುದನ್ನು ತಮ್ಮ ದೂರದೃಷ್ಟಿಯಿಂದ ವಿವೇಚಿಸಿ ಹೊಸಬರನ್ನು ಕರೆತಂದು ಪಕ್ಷವನ್ನು ಬೆಳೆಸಿದರು. 2004ರಲ್ಲಿ ಪಕ್ಷದ ಅಧ್ಯಕ್ಷರಾದಾಗ ಬಂಗಾರಪ್ಪ, ರಾಜಶೇಖರಮೂರ್ತಿ, ಗೋವಿಂದ ಕಾರಜೋಳರಂತಹ ಘಟಾನುಘಟಿ ವ್ಯಕ್ತಿಗಳನ್ನು ಪಕ್ಷಕ್ಕೆ ಕರೆತಂದರು. ಇಂತಹ ದೂರದೃಷ್ಟಿಯ ಯೋಜನೆಗಳಿಂದ ಕರ್ನಾಟಕದಲ್ಲಿ 84 ಸ್ಥಾನಗಳನ್ನು ಗೆದ್ದು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮುವುದು ಸಾಧ್ಯವಾಯಿತು. ಪಕ್ಷವನ್ನು ಜನರ ಹತ್ತಿರಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಜನಾದೇಶ ಯಾತ್ರೆ, ಭಾರತ ಉದಯ ಯಾತ್ರೆ, ಸುವರ್ಣ ಜಯಂತಿ ಯಾತ್ರೆಗಳ ಮುಂಚೂಣಿಯಲ್ಲಿ ನಿಂತು ಅವುಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಅವರು 1998ರಲ್ಲಿ ನಾಗರಿಕ ವಿಮಾನಯಾನ ಖಾತೆಯ ಸಚಿವರಾದಾಗ ಜನಪ್ರತಿನಿಧಿಯಾಗಿ ಅವರ ಕೆಲಸಗಳನ್ನು ಸಮೀಪದಿಂದ ನೋಡುವ ಅವಕಾಶ ನಮಗೆ ದೊರೆಯಿತು.

ಅವರು ಅಧಿಕಾರ ವಹಿಸಿಕೊಂಡ ಕೂಡಲೇ ಬೆಂಗಳೂರಿನಿಂದ ಮಲೇಶಿಯಾಗೆ ಮೊದಲ ಬಾರಿಗೆ ವಿಮಾನ ಹಾರಾಟ ಪ್ರಾರಂಭಿಸಿದರು. ಮೊದಲ ಹಾರಾಟದಲ್ಲಿ ಪ್ರಯಾಣಿಸಿದ ಮಾಧ್ಯಮದವರ ಜೊತೆ ನನಗೂ ಅವಕಾಶ ಕೊಟ್ಟಿದ್ದರು. ಬೆಂಗಳೂರಿಗೆ ಅಪರಿಚಿತವಾಗಿದ್ದ ಏರೋ ಬ್ರಿಡ್ಜ್‌ಗಳನ್ನು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಸ್ಥಾಪಿಸಿದರು. ಅವರ ಕಾಲದಲ್ಲಿಯೇ ಹುಬ್ಬಳ್ಳಿ ಏರ್‌ವೇಸ್ ಶುರುವಾಯಿತು. ಡೆಕ್ಕನ್ ಏರ್‌ವೇಸ್ ಹಿಂದಿನ ಪ್ರೇರಕ ಶಕ್ತಿ ಕೂಡ ಅವರೇ. ಅವರು ಪತ್ರಿಕೆಗಳಿಗೆ ಸಂದರ್ಶನ ನೀಡುವಾಗ ನಾನೂ ಜೊತೆಯಲ್ಲಿರುತ್ತಿದ್ದೆ. ಕೇವಲ ಎರಡು ಮೂರು ತಿಂಗಳುಗಳ ಹಿಂದೆ ವಿಮಾನಯಾನ ಖಾತೆ ಸಚಿವರಾದ ಅವರು ಪತ್ರಕರ್ತರ ಜಟಿಲ ತಾಂತ್ರಿಕ ಪ್ರಶ್ನೆಗಳಿಗೆ ಲೀಲಾಜಾಲವಾಗಿ ಉತ್ತರ ನೀಡುತ್ತಿದ್ದುದು ನನಗೆ ಅಚ್ಚರಿಯ ವಿಷಯ. ಅವರು ಕೇವಲ ಉಸ್ತುವಾರಿಯಾಗಿರದೆ ಖಾತೆಯ ಸಂಪೂರ್ಣ ಜವಾಬ್ದಾರಿಗಳನ್ನು ಅರಿತುಕೊಂಡು ಕೆಲಸ ಮಾಡುತ್ತಿದ್ದರು. ಅವರ ಮಾತು ಮತ್ತು ಕೃತಿಗಳಲ್ಲಿನ ಅಚ್ಚುಕಟ್ಟುತನವನ್ನು ನಾನು ಬೇರೆ ಯಾರಲ್ಲಿಯೂ ನೋಡಿಲ್ಲ.

ಬೆಂಗಳೂರಿನ ಸರ್ವತೋಮುಖ ಅಭಿವೃದ್ಧಿಯನ್ನು ಲಕ್ಷ್ಯವಾಗಿರಿಸಿಕೊಂಡು ಅನಂತಕುಮಾರರು ಬೆಂಗಳೂರಿಗೆ ಅನೇಕ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಉದ್ಯುಕ್ತರಾದರು. “ಬೆಂಗಳೂರಿಗೆ ಮಾನೋ ರೈಲು ಬೇಕು, ಮೆಟ್ರೋ ಬೇಡ, ಇದು ತುಂಬ ವೆಚ್ಚದ ಕೆಲಸ” ಎಂದು ದೇವೇಗೌಡರು ಹೇಳಿದಾಗ ಅನಂತಕುಮಾರರು ಮೆಟ್ರೋ ರೈಲಿನ ಅಗತ್ಯದ ಬಗ್ಗೆ ತಾರ್ಕಿಕವಾಗಿ ವಿವರಿಸಿ ಅವರನ್ನು ಒಪ್ಪಿಸಿದರು. ಬಿಡದಿ ಮತ್ತು ದೇವನಹಳ್ಳಿಗಳ ನಡುವೆ ಬೆಂಗಳೂರು ವಿಮಾನ ನಿಲ್ದಾಣ ನೆನೆಗುದಿಗೆ ಬಿದ್ದಾಗ ಅನಂತಕುಮಾರರು ಮುಂದೆ ನಿಂತು ದೇವನಹಳ್ಳಿಯ ಪರವಾಗಿ ನಿರ್ಧಾರ ತೆಗೆದುಕೊಂಡದ್ದೇ ಅಲ್ಲದೆ ಅದಕ್ಕೆ ಕೆಂಪೇಗೌಡ ವಿಮಾನ ನಿಲ್ದಾಣ ಎಂಬ ಹೆಸರನ್ನೂ ಸೂಚಿಸಿದರು. ವಾಜಪೇಯಿ ಸಂಪುಟದಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದಾಗ ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆ ಜಾರಿಗೆ ತಂದು ಬೆಂಗಳೂರೂ ಸೇರಿದಂತೆ ದೇಶದ ಅನೇಕ ನಗರಗಳ ಕೊಳೆಗೇರಿ ನಿವಾಸಿಗಳಿಗೆ ಮತ್ತು ಇತರ ಬಡವರಿಗೆ ಸ್ವಂತ ಮನೆಯಲ್ಲಿ ವಾಸ ಮಾಡುವ ಭಾಗ್ಯವನ್ನು ಕೊಡಿಸಿದರು.

ಬೆಂಗಳೂರು ನಗರ ರೈಲ್ವೆ ನಿಲ್ದಾಣವು ಮಿತಿಮೀರಿದ ಸಂಚಾರ ಒತ್ತಡದಲ್ಲಿದ್ದುದನ್ನು ಗಮನಿಸಿದ ಅನಂತಕುಮಾರರು ಯಶವಂತಪುರ ರೈಲ್ವೆ ನಿಲ್ದಾಣದ ಪ್ರಾರಂಭಕ್ಕೆ ಕಾರಣರಾದರು. ನೈಋತ್ಯ ವಲಯವನ್ನು ಬೆಂಗಳೂರಿನಲ್ಲಿಯೇ ಸ್ಥಾಪಿಸಬೇಕೆಂಬ ಬಲವಾದ ಒತ್ತಡವನ್ನು ಎದುರಿಸಿ ಅದನ್ನು ಹುಬ್ಬಳ್ಳಿಯಲ್ಲಿ ಪ್ರಾರಂಭಿಸಿ ಆ ಭಾಗದ ಅಭಿವೃದ್ಧಿಗೆ ಸಹಾಯ ಮಾಡಿದರು. ತಾವು ತಾವುದೇ ಖಾತೆಯ ಸಚಿವರಾಗಿದ್ದಾಗಲೂ ಕರ್ನಾಟಕಕ್ಕೆ ಆದ್ಯತೆ ನೀಡಿ ಹಲವಾರು ಯೋಜನೆಗಳನ್ನು ರಾಜ್ಯಕ್ಕೆ ತಂದರು.

ಎಸ್. ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಜ್ವಲಂತವಾಗಿದ್ದ ಕಾವೇರಿ ನೀರಿನ ಸಮಸ್ಯೆಯ ಬಗ್ಗೆ ಕೇಂದ್ರಕ್ಕೆ ಸಕಾಲಿಕವಾದ ಮಾಹಿತಿ ನೀಡಿ ಕರ್ನಾಟಕಕ್ಕೆ ಸ್ವಲ್ಪವೂ ಅನ್ಯಾಯವಾಗದಂತೆ ನೋಡಿಕೊಂಡರು. ಇದನ್ನು ಎಸ್.ಎಂ. ಕೃಷ್ಣ ಅವರೇ ಮಾಧ್ಯಮಗಳ ಮುಂದೆ ಹೇಳಿದ್ದಾರೆ. ಹಗಲಿರುಳೆನ್ನದೆ ದೇಶದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದ ಅವರನ್ನು ರಾಜಕಾರಣಿಗಳ ಕಾರ್ಯನಿರ್ವಹಣೆಯ ಮಾನದಂಡ (Bench mark) ಎಂದು ಹೇಳಬಹುದು.

2014ರಲ್ಲಿ ರಸಗೊಬ್ಬರ ಖಾತೆಯ ಜವಾಬ್ದಾರಿ ಅವರ ಪಾಲಿಗೆ ಬಂದಿತು. ಆ ಕಾಲದಲ್ಲಿ ದೇಶವು ವಾರ್ಷಿಕವಾಗಿ 8 ಲಕ್ಷ ಟನ್ ಯೂರಿಯಾ ಆಮದು ಮಾಡಿಕೊಳ್ಳುತ್ತಿತ್ತು. ಯೂರಿಯಾ ಗೊಬ್ಬರಕ್ಕಾಗಿ ದೇಶದಾದ್ಯಂತ ಗಲಾಟೆಗಳು ನಡೆಯುತ್ತಿದ್ದವು. ಹಾವೇರಿಯಲ್ಲಿ ಒಬ್ಬ ರೈತ ಗೋಲಿಬಾರಿಗೆ ಬಲಿಯಾಗಿದ್ದ. ಅನಂತಕುಮಾರರು ಸಚಿವರಾದ ಕೂಡಲೆ ಬೇವು ಲೇಪಿತ ಯೂರಿಯಾ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದರು. ಯೂರಿಯಾ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಉದ್ದೇಶದಿಂದ, ಮುಚ್ಚಿ ಹೋಗಿದ್ದ 6 ಯೂರಿಯಾ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಿದರು. ಇವರ ಖಾತೆಗೆ ಸಂಯೋಜಿತವಾಗಿದ್ದ ಮಂಗಳೂರು ಕೆಮಿಕಲ್ ಮತ್ತು ಫರ್ಟಿಲೈಸರ್ ಕಾರ್ಖಾನೆಗೆ 1000 ಕೋಟಿ ರೂಪಾಯಿಗಳ ಅನುದಾನ ಕೊಡಿಸಿ ಅದನ್ನು ನಷ್ಟದಿಂದ ಪಾರು ಮಾಡಿ ಲಾಭದ ಹಾದಿಯಲ್ಲಿ ಮುನ್ನಡೆಸಿದರು.

ಪುಟ 7 ರಲ್ಲಿ ಮುಂದುವರೆದಿದೆ

# ನೆನಪುಗಳಲ್ಲಿ ಚಿರಂಜೀವಿ

**ಡಾ. ವ್ಯಾಸ ದೇಶಪಾಂಡೆ,** ಅನಂತಕುಮಾರರ ನಿಕಟವರ್ತಿ




ಅನಂತಕುಮಾರ್ ವ್ಯಕ್ತಿತ್ವ ಅನೇಕರಿಗೆ ಪ್ರೇರಣಾದಾಯಕವಾಗಿರುವಂತೆಯೇ ಅವನ ನೆನಪುಗಳು ನನಗೆ ಪ್ರೇರಣೆಯಾಗಿವೆ. ಹುಬ್ಬಳ್ಳಿಯ ತೊರವಿ ಗಲ್ಲಿಯಲ್ಲಿ ನಮ್ಮ ಮನೆಯಿತ್ತು, ಅನಂತಕುಮಾರನ ಮನೆ ಎಂಟಿಎಸ್ ಕಾಲೋನಿಯಲ್ಲಿತ್ತು. ಅವನು ಸೈಕಲ್ ತೆಗೆದುಕೊಂಡು ನಮ್ಮ ಮನೆಗೆ ಬರುತ್ತಿದ್ದ, ನಾನು ಸೈಕಲ್ ತೆಗೆದುಕೊಂಡು ಅವರ ಮನೆಗೆ ಹೋಗುತ್ತಿದ್ದೆ. ನಮ್ಮ ಮನೆಗೆ ಬಂದ ತಕ್ಷಣ ನನ್ನ ತಾಯಿ ಅವನಿಗೆ "ಏ ಕುಮಾರ್, ಅವಲಕ್ಕಿ ಬೇಕಾ ಅಥವಾ ಚಹಾ ನೋ" ಎಂದು ಕೇಳುತ್ತಿದ್ದರು. ನನ್ನ ತಾಯಿ ಮತ್ತು ಅವನಿಗೆ ಮಾತ್ರ ಗೊತ್ತಿದ್ದ ಅದರ ಗೂಢಾರ್ಥ ನನಗೆ ಮೊದಲು ತಿಳಿದಿರಲಿಲ್ಲ. ಅವಲಕ್ಕಿ ಅಂದರೆ ಬಹಳ ಹೊತ್ತು ಕುಳಿತುಕೊಂಡು ಚರ್ಚೆ ಮಾಡುವುದು, ಚಹಾ ಬೇಕು ಅಂದರೆ ಬೇಗ ಹೊರಟು ಬಿಡೋದು ಎಂದು ನಂತರ ತಿಳಿಯಿತು. ಅವನು ಅವಲಕ್ಕಿ ಬೇಕು ಅಂದರೆ ಅವರ ನಡುವೆ ಚರ್ಚೆ ಪ್ರಾರಂಭ! ಶಂಕರಾಚಾರ್ಯ ಶ್ರೇಷ್ಠರೋ, ಮಧ್ವಾಚಾರ್ಯರು ಶ್ರೇಷ್ಠರೋ? ಭಾರತ ದೇಶ, ಇಂದಿರಾ ಗಾಂಧಿ - ಇಂತಹ ವಿಷಯಗಳ ಬಗ್ಗೆ ಒಂದೆರಡು ಗಂಟೆ ಮಾತನಾಡಿ ಚಹಾ ಕುಡಿದು ಹೋಗುತ್ತಿದ್ದ. ನನಗೆ ಬೇಜಾರಾದಾಗ ನಾನು ಅನಂತಕುಮಾರನ ಮನೆಗೆ ಹೋಗುತ್ತಿದ್ದೆ. ಅವರ ತಾಯಿ ನಾನು ಹೋದ ತಕ್ಷಣ "ಸುಹಾಸಿನಿ, ಚಹಾ ತೊಗೊಂಡು ಬಾ, ವ್ಯಾಸ ಬಂದ್ದಾನ" ಅನ್ನುವವರು.

ಒಂದು ಬಾರಿ ಪರೀಕ್ಷೆಯಲ್ಲಿ ಸಮಸ್ಯೆಯಾಗಿತ್ತು. ಅನಂತಕುಮಾರನ ತಾಯಿ ನನ್ನನ್ನು ಕರೆದು "ನೀವೆಲ್ಲ ಓದಿನ ಕಡೆಗೆ ಗಮನ ಕೊಡುತ್ತಿದ್ದೀರೋ ಇಲ್ಲವೋ" ಎಂದು ಕೇಳಿದರು. ಕುಮಾರ ಓದಿನ ಕಡೆಗೆ ಗಮನ ಕೊಡುತ್ತಿಲ್ಲ ಎಂದು ಅವರು ಹೇಳಿದಾಗ ನಾನು ಅನಂತಕುಮಾರನನ್ನು ಓದುವುದಕ್ಕಾಗಿ ಕರೆದುಕೊಂಡು ಹೋಗುತ್ತೇನೆ ಎಂದು ಹೆಬ್ಬಳ್ಳಿಗೆ ಏಳು ದಿನಗಳ ಕಾಲ ಕರೆದುಕೊಂಡು ಹೋಗಿದ್ದೆ. ಹೆಬ್ಬಳ್ಳಿಗೆ ಓದುವುದಕ್ಕಾಗಿ ಬರುವಾಗಲೂ ಕೂಡ ಅನಂತಕುಮಾರ್, ಕಾನೂನು ಪುಸ್ತಕಗಳ ಜೊತೆಗೆ ತನ್ನ ಆಸಕ್ತಿಯ ವಿಷಯದ ಪುಸ್ತಕಗಳನ್ನು ಪ್ಯಾಕ್ ಮಾಡಿಕೊಳ್ಳುತ್ತಿದ್ದುದನ್ನು ನೋಡಿ ಅವನ ತಾಯಿ ಸಿಟ್ಟಿನಿಂದ ಕೇವಲ ಕಾನೂನು ಪುಸ್ತಕ ಮಾತ್ರ ಪ್ಯಾಕ್ ಮಾಡಿ ಕೊಟ್ಟು ಕಳಿಸಿದ್ದರು. ನಮ್ಮ ಮನೆಯ ಎದುರುಗಡೆ 'ಅಮ್ಮ' ಎಂಬ ಮೈಸೂರಿನವರೊಬ್ಬರು ವಾಸವಾಗಿದ್ದರು. ಅವರು ಮನೆಯಲ್ಲಿ ಫಿಲ್ಟರ್ ಕಾಫಿ ಮಾಡುತ್ತಿದ್ದರು. ತಮಗೆ ಬೇಸರವಾದಾಗ "ಏ ಕುಮಾರ, ಕಾಫಿ ಮಾಡಿಟ್ಟಿನಿ ಬಾ" ಎನ್ನುತ್ತಿದ್ದರು. ನಾವೆಲ್ಲ ಗೆಳೆಯರೂ ಅವರ ಮನೆಗೆ ಹೋಗಿ ಕಾಫಿ ಕುಡಿದು ಬರುತ್ತಿದ್ದೆವು. ಅವರ ಮನೆಯಲ್ಲಿ ಒಂದು ಲೂನಾ ಗಾಡಿ ಇತ್ತು.

ವಿದ್ಯಾರ್ಥಿ ಪರಿಷತ್ತಿನ ಗ್ರಾಮ ವಿಕಾಸ ಯೋಜನೆಯಲ್ಲಿ ನಾವು ಹಳ್ಳಿಗೆ ಹೋಗ ಬೇಕಾಗಿತ್ತು. ನಾವೆಲ್ಲ ಗೆಳೆಯರು ಹುಬ್ಬಳ್ಳಿಯ ಪಕ್ಕದಲ್ಲಿರುವ ಹೆಬ್ಬಳ್ಳಿಗೆ ಹೋಗಬೇಕೆಂದು ನಿರ್ಧರಿಸಿದೆವು. ನಾನು ಮತ್ತು ಅನಂತಕುಮಾರ್ ಹೆಬ್ಬಳ್ಳಿಗೆ ಹೋಗಲು ಫಿಲ್ಟರ್ ಕಾಫಿ ಮಾಡುವ ಅಮ್ಮನ ಹತ್ತಿರ ಕೇಳಿ ಅವರ ಲೂನಾ ತೆಗೆದುಕೊಂಡು ಹೊರಟೆವು. ಆ ಸಮಯದಲ್ಲಿ 7 ರೂಪಾಯಿಗೆ ಒಂದು ಲೀಟರ್ ಪೆಟ್ರೋಲ್ ಸಿಗುತಿತ್ತು. ಒಂದು ಲೀಟರ್ ಪೆಟ್ರೋಲ್ ಹಾಕಿಸಿಕೊಂಡು ಅನಂತಕುಮಾರ್ ಅವರನ್ನು ಹಿಂದೆ ಕೂಡಿಸಿಕೊಂಡು ನಾನು ಹೊರಟೆ. ಹೆಬ್ಬಳ್ಳಿ ರಸ್ತೆಯಲ್ಲಿ ತುಂಬಾ ಧೂಳು, ಅಂಗಿಗೆ ಮೆತ್ತಿಕೊಂಡು ಬಣ್ಣವೇ ಬದಲಾಗಿತ್ತು. ರಸ್ತೆಯಲ್ಲಿಯೇ ಅಂಗಿ ತೆಗೆದು ಝಾಡಿಸಿ ಮತ್ತೆ ಹಾಕಿಕೊಂಡು ಹೆಬ್ಬಳ್ಳಿಗೆ ಹೋದೆವು. ಹೆಬ್ಬಳ್ಳಿಯಲ್ಲಿ ಒಂದು ಹಳೆಯ ಮನೆಯಿತ್ತು. ನೀವು ಬಂದು ಇಲ್ಲಿ ಆಸ್ಪತ್ರೆ ತೆರೆಯುವುದಾದರೆ ಬಾಡಿಗೆ ಕೊಡುವುದು ಬೇಡ ಎಂದು ಆ ಮನೆಯ ಯಜಮಾನರು ಹೇಳಿದರು. ಸ್ವಲ್ಪವಾದರೂ ಬಾಡಿಗೆ ತೆಗೆದುಕೊಳ್ಳಲೇ ಬೇಕು ಎಂದು ಅನಂತಕುಮಾರ್ ಒತ್ತಾಯಿಸಿದರು. ನಮಗೆಲ್ಲ ಚಹಾ ಮಾಡಲೆಂದು ಯಜಮಾನರು ಒಲೆಯ ಮೇಲೆ ನೀರಿಟ್ಟರು. ಒಲೆಯಲ್ಲಿ ಬೆಂಕಿ ಉರಿಸಲು ಜೋಳದ ದಂಟು ಬಳಸುತ್ತಿದ್ದರು. ಒಲೆಯನ್ನು ಊದಿದಾಗ ಆ ಜೋಳದ ದಂಟಿನ ಬೂದಿ ಚಹಾದ ಪಾತ್ರೆಯಲ್ಲಿಯೇ ಬೀಳುತ್ತಿತ್ತು. ಬೆಲ್ಲ ಹಾಕಿ ಮಾಡಿದ ಚಹಾ ನಮಗೆ ಕೊಟ್ಟಾಗ ನಾನು ಅನಂತಕುಮಾರ್ ಮುಖ ಮುಖ ನೋಡಿಕೊಂಡು ಸೇವಿಸಿದೆವು. ನಂತರ ಮನೆಯ ಯಜಮಾನರಿಗೆ 10 ರೂಪಾಯಿ ಮುಂಗಡವಾಗಿ ಕೊಟ್ಟು ಇದಕ್ಕೆ ಬಣ್ಣ ಮಾಡಿಸಿ ಮುಂದಿನ ವಾರ ನಾವು ಉದ್ಘಾಟನೆ ಮಾಡುತ್ತೇವೆ ಎಂದು ಹೇಳಿ ನಾವು ಹುಬ್ಬಳ್ಳಿಗೆ ವಾಪಸ್ಸು ಬಂದೆವು. ನನ್ನ ಆಸ್ಪತ್ರೆಯ ಉದ್ಘಾಟನೆಯೂ ಆಯಿತು. ಮುಂದೆ ಅನಂತಕುಮಾರ್ ಕೇಂದ್ರ ಸಚಿವರಾದರು. ಅವರು ಅಷ್ಟು ಉನ್ನತ ಸ್ಥಾನಕ್ಕೆ ಹೋದರೂ ನಮ್ಮಂತಹ ಹಳೆಯ ಗೆಳೆಯರನ್ನು ಮರೆಯಲಿಲ್ಲ. ಹೆಬ್ಬಳ್ಳಿಗೆ ಬಂದಾಗ ಜೊತೆ ಕುಳಿತುಕೊಂಡು ಮಾತನಾಡಿಸಿ ಹೋಗುತ್ತಿದ್ದರು. ಈ ರೀತಿಯಾಗಿ ಅನಂತಕುಮಾರ್ ನಮ್ಮ ನೆನಪುಗಳಲ್ಲಿ ಚಿರಂಜೀವಿಯಾಗಿ ನೆಲೆಸಿದ್ದಾರೆ.

(ಪುಟ 6 ರಿಂದ)

# ರಾಜಕಾರಣಕ್ಕೆ ಅನಂತ ಮಾನದಂಡ

ಇಂದು ಮಂಗಳೂರು ಕಾರ್ಖಾನೆ ನ್ಯಾನೋ ಯೂರಿಯಾ ಉತ್ಪಾದನೆ ಮಾಡುತ್ತಿದೆ. ೨೦೧೪ರ ನಂತರ ರಸಗೊಬ್ಬರಕ್ಕಾಗಿ ರೈತರು ಹೋರಾಟ ನಡೆಸಿದ ಉದಾಹರಣೆಗಳೇ ಇಲ್ಲ. ಜನೌಷಧಿ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೆ ತಂದ ಕೀರ್ತಿಯೂ ಅನಂತಕುಮಾರರಿಗೆ ಸಲ್ಲುತ್ತದೆ. ಜನರಿಗೆ ಕೈಗೆಟುಕುವ ದರದಲ್ಲಿ ಜೀವರಕ್ಷಕ ಔಷಧಿಗಳನ್ನು ಒದಗಿಸುವ ಈ ಯೋಜನೆಗೆ ಭಾರತೀಯ ಜನೌಷಧಿ ಪರಿಯೋಜನೆ (ಬಿಜೆಪಿ) ಎಂದು ಹೆಸರಿಟ್ಟರು. ಈ ಯೋಜನೆಯಿಂದ ಬಡವರಿಗೆ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳ ಉಳಿತಾಯವಾಗಿದೆ ಎಂದು ಪ್ರಧಾನ ಮಂತ್ರಿಯವರೇ ಇತ್ತೀಚೆಗೆ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಔಷಧ ಕಂಪೆನಿಗಳ ಲಾಬಿಯನ್ನು ಎದುರು ಹಾಕಿಕೊಂಡು ಜನೌಷಧಿ ಯೋಜನೆಯನ್ನು ದೇಶದ ಮೂಲೆಮೂಲೆಗಳಿಗೆ ತಲುಪಿಸಿದ ಅನಂತಕುಮಾರರ ಸಾಧನೆ ಸದಾ ಸ್ಮರಣೀಯ.

ಅನಂತಕುಮಾರರು ಜನರ ನಡುವೆ ಶಾಶ್ವತವಾಗಿ ನಿಲ್ಲುವಂತಹ ಅನೇಕ ಜನೋಪಯೋಗಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದ್ದಾರೆ. ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ಹೈವೇ ಕಲ್ಪನೆ ಕೂಡ ಇಂದು ಅನಂತಕುಮಾರರ ಸಹಾಯದಿಂದ ಸಾಕಾರಗೊಂಡಿದೆ ಎಂದು ಮೈಸೂರಿನ ಸಂಸದ ಶ್ರೀ ಪ್ರತಾಪ್ ಸಿಂಹ ಹೇಳಿದ್ದಾರೆ.

ಅನಂತಕುಮಾರರಿಗೆ ಚುನಾವಣೆ ಗೆಲ್ಲುವುದು ಮುಖ್ಯವಾಗಿರಲಿಲ್ಲ, ಗೆದ್ದ ಮೇಲೆ ಜನರಿಗೆ ಉಪಯೋಗವಾಗುವ ಯಾವ ಕೆಲಸಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ಅವರು ಯೋಚನೆ ಮಾಡುತ್ತಿದ್ದರು. ಬೆಂಗಳೂರು ನಗರದ ಅಭಿವೃದ್ಧಿಗಾಗಿ ಅವರಷ್ಟು ಕೆಲಸ ಮಾಡಿದ ಇನ್ನೊಬ್ಬ ವ್ಯಕ್ತಿಯನ್ನು ಕಾಣುವುದು ಸಾಧ್ಯವಿಲ್ಲ. ಅದೇ ರೀತಿ, ಪಕ್ಷದ ಪದಾಧಿಕಾರಿಯಾಗಿ, ಸರಕಾರದ ಭಾಗವಾಗಿ ಅವರು ಮಾಡಿದ ಕೆಲಸಗಳನ್ನೇ ಮುಂದುವರಿಸಿಕೊಂಡು ಹೋಗಲಾಗುತ್ತಿದೆಯೇ ಹೊರತು ಹೊಸ ಉಪಕ್ರಮಗಳನ್ನೇನೂ ನಾವು ಕಾಣುತ್ತಿಲ್ಲ.

ವೈಯಕ್ತಿಕವಾಗಿ ಅವರೊಂದಿಗೆ ಸಿನಿಮಾ ನೋಡಿದ, ಪ್ರವಾಸ ಮಾಡಿದ ಅಪೂರ್ವ ಅನುಭವ ನನಗಿದೆ. ಹಿರಿಯ ನಾಯಕರಿಗೆ ಭಾಷಣವನ್ನು ಬರೆದುಕೊಡುವುದರಿಂದ ಹಿಡಿದು ಚುನಾವಣೆಯ ಕಾಲದಲ್ಲಿ ಘೋಷವಾಕ್ಯಗಳನ್ನು ಹೊಸೆಯುವ ವರೆಗೂ ಅನಂತಕುಮಾರರ ಪಾತ್ರವಿರುತ್ತಿತ್ತು. ಪಕ್ಷದ ಕಚೇರಿಯನ್ನು ಪಂಚವಟಿಯಲ್ಲಿ ಪ್ರಾರಂಭಿಸುವಾಗ ಬಿಜೆಪಿ ಜಾಲತಾಣವನ್ನೂ ಅನಾವರಣ ಮಾಡಿದೆವು. ಅದರಲ್ಲಿ ಪಕ್ಷದ ಸುದ್ದಿಗಳನ್ನೂ ಫೋಟೋಗಳನ್ನೂ ಹೇಗೆ ಹಾಕಬೇಕೆಂಬ ಬಗ್ಗೆ ಕೂಡ ಮಾರ್ಗದರ್ಶನ ನೀಡುತ್ತಿದ್ದರು. ಮಾಧ್ಯಮದ ಮುಂದೆ ಅವರು ಕೊಡುವ ಹೇಳಿಕೆಗಳು ವಿವಾದಾತೀತವಾಗಿರುತ್ತಿದ್ದವು. ತಾವು ನೀಡುವ ಹೇಳಿಕೆಗಳನ್ನು ಜನರಿಗೆ ತಲುಪಿಸಲು ಮಾಧ್ಯಮವನ್ನು ಬಳಸಿಕೊಳ್ಳುವ ಕಲೆಯನ್ನು ಅವರು ಕರತಲಾಮಲಕ ಮಾಡಿಕೊಂಡಿದ್ದರು. ಅವರು ವೈಯಕ್ತಿಕ ನೆಲೆಯಲ್ಲಿ ಇತರ ವ್ಯಕ್ತಿಗಳ, ಪಕ್ಷಗಳ ಕುರಿತು ಒಮ್ಮೆಯೂ ಲಘುವಾಗಿ ಮಾತನಾಡಿದವರಲ್ಲ.

ಅನಂತಕುಮಾರ್ ಬಗ್ಗೆ ಮಾತನಾಡಲು ಅನಂತ ವಿಷಯಗಳಿವೆ. ಅಂತಹ ಅದ್ಭುತ ವ್ಯಕ್ತಿತ್ವ ಅವರದು. ನೇತೃತ್ವದ ಪಾಠಶಾಲೆ ಅವರು. ಕರ್ತೃತ್ವದ ಮಾದರಿ ಅನಂತಕುಮಾರರು.

ಸಸ್ಯಲೋಕ ಪರಿಚಯ ಮಾಲಿಕೆ- 19

# ಹೊಳೆ ದಾಸವಾಳ

ಲ್ಯಾಗರ್‌ಸ್ಟ್ರೋಯಿಮಿಯಾ ಎಂಬ ಸಸ್ಯಶಾಸ್ತ್ರೀಯ ಹೆಸರಿನ ಹೊಳೆ ದಾಸವಾಳ ಮರದ ಹೂಗಳು ತಿಳಿ ನೇರಳೆ, ಕಡು ಗುಲಾಬಿ, ಒಮ್ಮೊಮ್ಮೆ ತಿಳಿ ಬಿಳಿ ಬಣ್ಣ ಹೊಂದಿರುತ್ತವೆ. ಬೆಂಗಳೂರು ನಗರದಲ್ಲಿ ಅಸಂಖ್ಯ ಸಂಖ್ಯೆಯಲ್ಲಿರುವ ಈ ಮರಗಳು ಪ್ರತಿ ವರ್ಷ ಮಾರ್ಚ್ ಏಪ್ರಿಲ್ ತಿಂಗಳುಗಳಲ್ಲಿ ಹೂವುಗಳಿಂದ ತುಂಬಿಕೊಂಡು ಇಡೀ ನಗರವನ್ನು ಸಿಂಗರಿಸುತ್ತವೆ. ಚಿತ್ತಾಕರ್ಷಕ ಹೂವುಗಳು, ದಟ್ಟ ಎಲೆಗಳು ಮತ್ತು ಗೋಲಿ ಗಾತ್ರದ ಹಸಿರು ಕಾಯಿಗಳ ಗೊಂಚಲುಗಳಿಂದ ಕಂಗೊಳಿಸುವ ಹೊಳೆ ದಾಸವಾಳ ಮರಗಳಿಗೆ "ಭಾರತದ ಹೆಮ್ಮೆಯ ಮರ, Pride of India Tree)" ಎಂಬ ಹೆಸರು ಅನ್ವರ್ಥವಾಗಿದೆ. ಕನ್ನಡದಲ್ಲಿ ಹೊಳೆ ಮತ್ತಿ ಎಂಬ ಇನ್ನೊಂದು ಹೆಸರಿನಿಂದಲೂ ಇದನ್ನು ಕರೆಯುತ್ತಾರೆ.ಹೊಳೆ ದಾಸವಾಳ ಮರಗಳು ಭಾರತ, ಬಾಂಗ್ಲಾದೇಶ, ಚೀನಾ, ಥಾಯ್ಲೆಂಡ್, ಶ್ರೀಲಂಕಾ, ಮಲೇಶಿಯಾ ಮುಂತಾದ ಆಗ್ನೇಯ ಏಶಿಯದ ದೇಶಗಳಲ್ಲಿ ಕಂಡುಬರುತ್ತವೆ.

**ಸಸ್ಯವಿವರ:** ಹೊಳೆ ದಾಸವಾಳವು ಮಧ್ಯಮ ಗಾತ್ರದ, ಹೆಚ್ಚೆಂದರೆ ಸುಮಾರು ೨೦ ಮೀ. ಎತ್ತರದ ವರೆಗೆ ಬೆಳೆಯುವಂಥ ಮರ. ಈ ಮರದ ಬೆಳವಣಿಗೆ ತುಂಬಾ ನಿಧಾನ. ಆದರೆ ಸಮೃದ್ಧವಾದ ನೀರು ದೊರೆತರೆ ಇದು ಬಹಳ ಬೇಗ, ಬಹು ಎತ್ತರ ಬೆಳೆಯುತ್ತದೆ. ಒಣ ಪ್ರದೇಶದಲ್ಲಿ ಬೆಳವಣಿಗೆ ಕುಂಠಿತಗೊಂಡು ಕುಬ್ಜವಾಗಿರುತ್ತದೆ. ಇದು ನಮ್ಮ ಗ್ರಾಮಾಂತರ ಪ್ರದೇಶದ ಹೊಳೆ ಸಾಲುಗಳಲ್ಲಿ ಬೆಳೆಯುವ ಸಾಮಾನ್ಯ ವೃಕ್ಷಪ್ರಭೇದವಾಗಿದೆ. ಬೆಟ್ಟ ಪ್ರದೇಶಗಳಲ್ಲಿ ಕಾಣಿಸದ ಈ ಮರಗಳು ತಗ್ಗು ಹಾಗೂ ಕಣಿವೆ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತವೆ. ಹೊಳೆ ದಾಸವಾಳ ಎಲೆಯುದುರಿಸುವ ಮರ. ಇದರ ಕಾಂಡದ ತೊಗಟೆ ಬೂದು ಬಣ್ಣದ್ದಾಗಿದ್ದು ಸಣ್ಣ ಬಿರುಕುಗಳಿಂದ ಕೂಡಿರುತ್ತದೆ. ಎಲೆಗಳು ದೀರ್ಘವೃತ್ತಾಕಾರವಾಗಿರುತ್ತವೆ. ಮರಗಳು ಸಾಮಾನ್ಯವಾಗಿ ಬೇಸಿಗೆಯಲ್ಲಿ ಅಂದರೆ ಏಪ್ರಿಲ್ ನಿಂದ ಜೂನ್ ವರೆಗೆ ಹೂ ತಳೆಯುತ್ತವೆ. ಇದರ ಸುಂದರ ಹೂವುಗಳು ಗೊಂಚಲಾಗಿ, ಗುಲಾಬಿ ಅಥವ ನೇರಳೆ ಬಣ್ಣದಲ್ಲಿ ಇರುತ್ತದೆ. ಮೊದಲಿಗೆ ಗೊಂಚಲಿನ ಬುಡದಲ್ಲಿ ಹೂ ಅರಳುತ್ತದೆ. ಅನಂತರ ಕ್ರಮೇಣವಾಗಿ ಮೇಲ್ಭಾಗದಲ್ಲಿ ಅರಳುತ್ತದೆ.



ಹೂವು ಹಳೆಯದಾಗುತ್ತ ಬಿಳಿ ಬಣ್ಣಕ್ಕೆ ತಿರುಗುತ್ತದೆ. ಹೊಳೆ ದಾಸವಾಳದ ಕಾಯಿ ಮೊದಲಿಗೆ ಹಸಿರು ಬಣ್ಣದ್ದಾಗಿದ್ದು ನಂತರ ಕಂದು ಮತ್ತು ಕೊನೆಯಲ್ಲಿ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಕಾಯಿ ಸಂಪೂರ್ಣವಾಗಿ ಹಣ್ಣಾದ ನಂತರ ತನ್ನಷ್ಟಕ್ಕೆ ಒಡೆಯುತ್ತದೆ. ಹೊಳೆ ದಾಸವಾಳದ ಬೀಜ ಚಪ್ಪಟೆಯಾಗಿ ತ್ರಿಕೋಣಾಕಾರದಲ್ಲಿದ್ದು ಬಾಲವನ್ನು ಸಹ ಹೊಂದಿರುತ್ತದೆ. ಈ ಬಾಲವು ಬೀಜವನ್ನು ಗಾಳಿಯಲ್ಲಿ ಅಥವ ನೀರಿನಲ್ಲಿ ತೇಲುವಂತೆ ಮಾಡಿ ಬೀಜ ಪ್ರಸರಣಕ್ಕೆ ಸಹಾಯಕವಾಗಿದೆ.

**ಉಪಯೋಗಗಳು:** ಜೇನು ನೊಣಗಳು, ಚಿಟ್ಟೆಗಳು, ಪಕ್ಷಿಗಳಿಗೆ ಸಮೃದ್ಧವಾಗಿ ಆಹಾರ ನೀಡುವ ಈ ಗಿಡಗಳು ಕೆಲವೊಮ್ಮೆ ವರ್ಷಕ್ಕೆರಡು ಬಾರಿ ಹೂವು ಬಿಡುವುದೂ ಉಂಟು. ಮೂರೇ ವರ್ಷದಲ್ಲಿ ಹೂವು ಬಿಡಲು ಆರಂಭಿಸುವ ಹೊಳೆ ದಾಸವಾಳದಲ್ಲಿ ಹಲವು ಔಷಧೀಯ ಗುಣಗಳಿವೆ. ಇದರ ಎಲೆಗಳನ್ನು ಬಳಸಿದ ಚಹಾ ಅತ್ಯಂತ ಆರೋಗ್ಯಕರ. ಮೂತ್ರನಾಳದ ಸೋಂಕು, ದೇಹದ ತೂಕ, ಮಧುಮೇಹ, ರಕ್ತದ ಒತ್ತಡ ಕಡಿಮೆ ಮಾಡುವಂತಹ ಅಂಶಗಳು ಇದರಲ್ಲಿವೆ. ಈ ಮರ ಬಾಳಿಕೆಯಲ್ಲಿ ತೇಗದ ನಂತರದ ಸ್ಥಾನವನ್ನು ಪಡೆದಿದೆ. ಹೀಗಾಗಿ ಈ ಮರವನ್ನು ರೈಲ್ವೇ ಸ್ಲೀಪರುಗಳಿಗಾಗಿ, ಪೀಠೋಪಕರಣ ಮತ್ತು ತಳ್ಳುಗಾಡಿ ತಯಾರಿಸುವಲ್ಲಿ ಬಳಸಲಾಗುತ್ತಿದೆ.



ಛಾಯಾ ಓಕ್ ಬಾಪಟ್

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಹಸಿರು ಭಾನುವಾರದ ಸಂಖ್ಯೆ | ಸ್ಥಳ | ಭಾಗವಹಿಸಿದವರು | ನೆಡಲಾದ ಗಿಡಗಳ ಸಂಖ್ಯೆ/ ಚಟುವಟಿಕೆಗಳು |
|---|---|---|---|
| 378 | ಮಾರಗೊಂಡನ ಹಳ್ಳಿ ಕೆರೆಯ ಸಮೀಪ, ಎಲೆಕ್ಟ್ರಾನಿಕ್ ಸಿಟಿ. | ಬಿಎಂಎಸ್ ಕಾಲೇಜಿನ ವಿದ್ಯಾರ್ಥಿಗಳು, ಸ್ಥಳೀಯರು, ಅದಮ್ಯ ಚೇತನ ಮತ್ತು ಯೂಥ್ ಸೇವಾ ಕಾರ್ಯಕರ್ತರು (100 ಜನ) | ನೇರಳೆ, ಆಮ್ಲ, ಹಲಸು, ಬುಗುರಿ, ಮಾವು, ತಬೂಬಿಯಾ ಗಿಡಗಳನ್ನು ಸೇರಿ ಒಟ್ಟು 60 ಗಿಡಗಳನ್ನು ನೆಡಲಾಯಿತು. |
| 379 | ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಜಿಇಎಫ್ ಬಯೋ ಪಾರ್ಕ್. | ಬಿ ಎಂ ಎಸ್ ಕಾಲೇಜು, ಗ್ಲೋಬಲ್ ಅಕಾಡೆಮಿ, ಕ್ರೈಸ್ಟ್ ಕಾಲೇಜು, ಕಲ್ಪರಕ್ಷಾ ಉಚಿತ ವಸತಿ ನಿಲಯದ ಮಕ್ಕಳು, ಅದಮ್ಯ ಚೇತನದ ಕಾರ್ಯಕರ್ತರು (120ಜನ) | ಈ ಹಿಂದೆ ನೆಡಲಾದ 1500 ಗಿಡಗಳಿಗೆ ನೀರುಣಿಸುವುದು ಮತ್ತು ಕಳೆ ತೆಗೆಯುವ ಕೆಲಸ |
| 380 | 21ನೇ ಮುಖ್ಯರಸ್ತೆ, ಮಹಾವೀರ ಓಬೇರಾಯ್ ಅಪಾರ್ಟ್ಮೆಂಟ್ ಹಿಂಭಾಗ, 2ನೇ ಹಂತ, ಜೆ. ಪಿ. ನಗರ | ಬಿಎಂಎಸ್ ಕಾಲೇಜು, ದಯಾನಂದ ಸಾಗರ ಕಾಲೇಜು, ಗ್ಲೋಬಲ್ ಅಕಡೆಮಿ ಆಫ್ ಟೆಕ್ನಾಲಜಿ ಹಾಗೂ ಬೆಂಗಳೂರು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸ್ಥಳೀಯರು ಮತ್ತು ಅದಮ್ಯ ಚೇತನದ ಕಾರ್ಯಕರ್ತರು | ರಸ್ತೆಯ ಎರಡು ಬದಿಯಲ್ಲಿ 16 ಗಿಡಗಳನ್ನು ನೆಡಲಾಯಿತು. |
| 381 | ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್-1, | ಬಿಎಂಎಸ್ & ವೈಇಎಂ ಕಾಲೇಜು, ಜ್ಯೋತಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಗ್ಲೋಬಲ್ ಅಕಾಡೆಮಿ ಟೆಕ್ನಾಲಜಿ, ಆರ್‌ಎನ್‌ಎಸ್‌ಐಟಿ ಮತ್ತು ಅದಮ್ಯ ಚೇತನದ ಸಿಬ್ಬಂದಿಗಳು (132 ಜನ) | 10 ನೇರಳೆ ಮತ್ತು 10 ಬೆಟ್ಟದ ನೆಲ್ಲಿ ಗಿಡ |

ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Madhumathi Kumbaluru**
Inputs: **Poornaprajna / Srikanth K / Veena Vittal**
Photographs: **Gopal TS / Chakrapani Kengeri / Internet Sources**
Acknowledgements: **Raghavendra Prasad / G M Inamdar / Chaya Bapat**
Sketch: **Raghupathi Sringeri** Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ರಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

ವ್ಯಕ್ತಿ ವಿಶೇಷ ಮಾಲಿಕೆ

# ಮಾನವತಾವಾದಿ, ವಿಚಾರವಾದಿ, ಶಿಕ್ಷಣತಜ್ಞ ಡಾ. ಎಚ್ ನರಸಿಂಹಯ್ಯ



**"ಕಳಪೆ ಶಿಕ್ಷಕ ದೂರುತ್ತಿರುತ್ತಾನೆ, ಸಾಮಾನ್ಯ ಶಿಕ್ಷಕ ವಿವರಿಸುತ್ತಾನೆ, ಉತ್ತಮ ಶಿಕ್ಷಕ ಕಲಿಸುತ್ತಾನೆ, ಶ್ರೇಷ್ಠ ಶಿಕ್ಷಕ ಪ್ರೇರಣೆ ನೀಡುತ್ತಾನೆ"**

**-ಡಾ. ಎಚ್ಚೆನ್**

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಒಂದು ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ಡಾ. ಎಚ್ ನರಸಿಂಹಯ್ಯನವರನ್ನು ಕರೆದು ತರುವ ಕೆಲಸವನ್ನು ನನಗೆ ವಹಿಸಿದ್ದರು. ಆಗ ಅವರು ನ್ಯಾಷನಲ್ ಕಾಲೇಜು ಹಾಸ್ಟೆಲಿನಲ್ಲಿ ವಾಸವಾಗಿದ್ದರು. (ಅವರು ಯಾವಾಗಲೂ ಅಲ್ಲೇ ವಾಸವಾಗಿದ್ದವರು) ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಯಾಗಿದ್ದವರು, ವಿದೇಶದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದವರು, ವಿಧಾನ ಪರಿಷತ್ತಿನ ಶಾಸಕರಾಗಿದ್ದವರು, ಪದ್ಮಭೂಷಣ ಸನ್ಮಾನಿತರು, ಅವರನ್ನು ಮಾತನಾಡಿಸುವುದು ಹೇಗೆ ಎಂದು ನಾನು ಯೋಚಿಸುತ್ತಿದ್ದೆ. ನ್ಯಾಷನಲ್ ಕಾಲೇಜ್ ಹಾಸ್ಟೆಲಿನಲ್ಲಿ ಅವರ ಕೋಣೆಯ ಬಾಗಿಲು ಮುಚ್ಚಿತ್ತು. ಅಲ್ಲಿದ್ದ ಹುಡುಗರನ್ನು ವಿಚಾರಿಸಲಾಗಿ, ದೂರದಲ್ಲಿ ನಿಂತು ಯಾರ ಹತ್ತಿರವೋ ನಿಂತಿದ್ದ ವ್ಯಕ್ತಿಯೊಬ್ಬರನ್ನು ತೋರಿಸಿದರು. ನನಗೆ ನನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಒಂದು ಬಿಳಿಯ ಪಂಚೆ, ಬಿಳಿ ಜುಬ್ಬಾ, ತಲೆಯ ಮೇಲೊಂದು ಬಿಳಿ ಟೋಪಿ - ಇಷ್ಟು ಸರಳವೇ ಇವರ ವೇಷ ಭೂಷಣ ಎನ್ನಿಸಿತ್ತು. ಇಂಥವರ ಜೊತೆ ವ್ಯವಹಾರ ಸುಲಭ ಮತ್ತು ಸರಳ ಎಂದೂ ಅನ್ನಿಸಿ ನಾನು ನಿರಾಳನಾಗಿದ್ದೆ. ಅವರ ಕೋಣೆಯೂ ಅಷ್ಟೇ ಸರಳವಾಗಿತ್ತು. ಒಂದು ಹಳೆಯ ಕುರ್ಚಿ ಮಾತ್ರ ಇತ್ತೆಂದು ನನ್ನ ನೆನಪು. ಅತಿಥಿಗಳು ಕುಳಿತುಕೊಳ್ಳಲು ಒಂದು ಚಾಪೆ. ಅವರೂ ಚಾಪೆಯ ಮೇಲೇ ಕುಳಿತುಕೊಳ್ಳುತ್ತಿದ್ದರು. ಸಮಾರಂಭಕ್ಕೆ ಬರಲು ಅವರಿಗೆ ಬೇರೆ ಯಾವ ಸಿದ್ಧತೆಗಳೂ ಬೇಕಾಗಿರಲಿಲ್ಲ. ನಿಂತ ಮೆಟ್ಟಿನಲ್ಲಿಯೇ ನನ್ನೊಂದಿಗೆ ಹೊರಡಲು ಸಿದ್ಧರಾದರು. ಹೊರಟಾಗ ಕೋಣೆಗೆ ಬೀಗವನ್ನೂ ಹಾಕಲಿಲ್ಲ. ಇಷ್ಟು ಬರೆದರೆ ಎಚ್ಚೆನ್ ಬದುಕಿದ ರೀತಿಯ ಬಗ್ಗೆ ಸಮಗ್ರವಾಗಿ ಬರೆದಂತೆ!

ಚಿಕ್ಕಬಳ್ಳಾಪುರ ಜಿಲ್ಲೆಯ ಹೊಸೂರಿನಲ್ಲಿ ೦೬/೦೬/೧೯೨೦ರಂದು ಹನುಮಂತಪ್ಪ ಮತ್ತು ವೆಂಕಟಮ್ಮ ದಂಪತಿಗಳ ಮಗನಾಗಿ ಜನಿಸಿದ ಎಚ್ ನರಸಿಂಹಯ್ಯನವರ ಪ್ರಾಥಮಿಕ ವಿದ್ಯಾಭ್ಯಾಸ ಗೌರಿಬಿದನೂರಿನ ಸರಕಾರಿ ಶಾಲೆಯಲ್ಲಿ ನಡೆಯಿತು. ತಮ್ಮ ನೆಚ್ಚಿನ ಮುಖ್ಯೋಪಾಧ್ಯಾಯರಾದ ಶ್ರೀ ಎಂ ಎಸ್ ನಾರಾಯಣರಾಯರು ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಸೇರಿಕೊಂಡಾಗ ಅವರ ಆಹ್ವಾನದ ಮೇರೆಗೆ ಓದು ಮುಂದುವರಿಸಲು ಹೊಸೂರಿನಿಂದ ೮೫ ಕಿಲೋಮೀಟರ್ ನಡೆದುಕೊಂಡೇ ಬರಬೇಕಾದ ಬಡತನ. ಹೀಗಾಗಿ ಮೊದಲಿಗೆ ತಮ್ಮ ಮುಖ್ಯೋಪಾಧ್ಯಾಯರ ಮನೆಯಲ್ಲಿ ನಂತರ ಜೀವನ ಪರ್ಯಂತ ಶಾಲೆಯ ವಿದ್ಯಾರ್ಥಿನಿಲಯದಲ್ಲಿ (ಕೆಲಕಾಲ ರಾಮಕೃಷ್ಣ ಆಶ್ರಮದಲ್ಲಿದ್ದರು) ವಾಸ ಮಾಡಿದರು.

೧೯೪೪ರಲ್ಲಿ ಬಿಎಸ್ಸಿ (ಆನರ್ಸ್) ಮತ್ತು ೧೯೪೬ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಎಂಎಸ್ಸಿ ಪದವಿ ಪಡೆದು ನ್ಯಾಷನಲ್ ಕಾಲೇಜಿನಲ್ಲಿಯೇ ಶಿಕ್ಷಕರಾಗಿ ನಿಯುಕ್ತರಾದರು. ಅಮೆರಿಕಾದ ಒಹಾಯೋ ಯೂನಿವರ್ಸಿಟಿಯಿಂದ ಪರಮಾಣು ಭೌತಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದರು. ೧೯೬೧ ರಿಂದ ೧೯೭೨ರ ವರೆಗೆ ನ್ಯಾಷನಲ್ ಕಾಲೇಜಿನ ಪ್ರಾಂಶುಪಾಲರಾಗಿ ೧೯೭೨ ರಿಂದ ೧೯೭೭ರ ವರೆಗೆ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಕಾರ್ಯ ನಿರ್ವಹಿಸಿದರು. ನ್ಯಾಷನಲ್ ಕಾಲೇಜನ್ನು ತಮ್ಮ ಶಿಕ್ಷಣಕಾರ್ಯದ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡು ಅಲ್ಲಿ ಸಹಶಿಕ್ಷಣ, ಲೈಂಗಿಕ ಅರಿವು ಮೂಡಿಸುವ ಶಿಕ್ಷಣ, ಅಂತರ ತರಗತಿ ನಾಟಕ ಸ್ಪರ್ಧೆಗಳು, ಬೆಂಗಳೂರು ವಿಜ್ಞಾನ ವೇದಿಕೆ, ಸಮಾಜ ಸೇವೆಯ ಶಿಬಿರಗಳು, ಮುಂತಾದ ಹೊಸ ಉಪಕ್ರಮಗಳನ್ನು ಪ್ರಾರಂಭಿಸಿದರು. ಮಕ್ಕಳೊಂದಿಗೆ ಮಕ್ಕಳಾಗಿ ಬೆರೆತು ಹಾಕಿ, ಬ್ಯಾಸ್ಕೆಟ್‌ಬಾಲ್ ಆಟವಾಡುತ್ತಿದ್ದರು. ನ್ಯಾಷನಲ್ ಎಜುಕೇಶನ್ ಸೊಸೈಟಿಯ ವಿಸ್ತರಣೆಗೂ ಕಾರಣರಾಗಿದ್ದರು. ತಮ್ಮ ಸಂಸ್ಥೆಯ ಶಿಕ್ಷಣ ವಿದ್ಯಾರ್ಥಿಗಳ ಪೋಷಕರಿಗೆ ಭಾರವಾಗಬಾರದೆಂಬ ಎಚ್ಚರ ಅವರಲ್ಲಿತ್ತು. ಉಪಕುಲಪತಿಯಾಗಿ ಬೆಂಗಳೂರು ವಿಶ್ವವಿದ್ಯಾಲಯದ ನಾಗರಭಾವಿ ಕ್ಯಾಂಪಸ್ಸಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದರು. ಅಲ್ಲಿಯೂ ಅನೇಕ ಹೊಸ ಅಧ್ಯಯನ ವಿಷಯಗಳನ್ನು ಪ್ರಾರಂಭಿಸಿದರು.

ಸರಳ ಮತ್ತು ಸಮಾಜಮುಖಿ ಜೀವನ ನಡೆಸಲು ನರಸಿಂಹಯ್ಯನವರಿಗೆ ಗಾಂಧೀಜಿಯ ಪ್ರೇರಣೆ ಕೂಡ ಕಾರಣ. ೧೯೩೬ರಲ್ಲಿ ಗಾಂಧೀಜಿ ನ್ಯಾಷನಲ್ ಹೈಸ್ಕೂಲಿಗೆ ಭೇಟಿ ನೀಡಿದಾಗ ಅವರ ಭಾಷಣಗಳನ್ನು ಭಾಷಾಂತರಿಸುವ ಅವಕಾಶ ನರಸಿಂಹಯ್ಯನವರಿಗೆ ಲಭಿಸಿತ್ತು. ಗಾಂಧೀಜಿಯ ಕರೆಯ ಮೇರೆಗೆ ವಿದ್ಯಾಭ್ಯಾಸವನ್ನು ತೊರೆದು ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದರು, ಸುಮಾರು ಒಂಭತ್ತು ತಿಂಗಳ ಕಾಲ ಬೆಂಗಳೂರು, ಮೈಸೂರು ಮತ್ತು ಯರವಾಡಾ ಜೈಲುಗಳಲ್ಲಿ ಬಂದಿಯಾಗಿದ್ದರು. ಶಿಕ್ಷಕರಾಗಿ ವೃತ್ತಿ ಪ್ರಾರಂಭಿಸಿದ ಮೇಲೆಯೂ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ 'ಮೈಸೂರು ಚಲೋ' ಚಳವಳಿಯಲ್ಲಿ ಭಾಗವಹಿಸಿದರು. ರಾಷ್ಟ್ರಪ್ರೇಮವನ್ನು ಜಾಗೃತಿಗೊಳಿಸಲು"ಇನ್‌ಕಿಲಾಬ್" ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ೩೭ ಸಂಚಿಕೆಗಳನ್ನು ಪ್ರಕಟಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ್ದರೂ ಅವರ ಸಮಕಾಲೀನರು ಅವರನ್ನು ನೆನಪಿಸಿಕೊಳ್ಳುವುದು 'ವಿಚಾರವಾದಿ' ಎಂತಲೇ. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಬೆಂಗಳೂರು ವಿಜ್ಞಾನ ವೇದಿಕೆಯ ಮೂಲಕ ೨೦೦೦ಕ್ಕೂ ಹೆಚ್ಚು ಉಪನ್ಯಾಸಗಳನ್ನು ಏರ್ಪಡಿಸಿದರು; ೫೦೦ಕ್ಕೂ ಹೆಚ್ಚು ಚಲನಚಿತ್ರಗಳನ್ನು ಪ್ರದರ್ಶಿಸಿದರು. ಲಲಿತಕಲಾ ಅಕಾಡೆಮಿ ಮತ್ತು ಬಿ ವಿ ಜಗದೀಶ್ ವಿಜ್ಞಾನ ಕೇಂದ್ರಗಳ ಸ್ಥಾಪನೆಗೂ ಅವರೇ ಕಾರಣ.

ಮೂಢನಂಬಿಕೆಗಳ ವಿರುದ್ಧ ಸತತವಾಗಿ ಪ್ರಚಾರ ಮಾಡಿದ ಎಚ್ಚೆನ್ ಪವಾಡ ಮತ್ತು ಮೂಢನಂಬಿಕೆಗಳ ಪರಿಶೀಲನೆಗಾಗಿ ಸಮಿತಿಯೊಂದನ್ನು ೧೯೭೬ರಲ್ಲಿ ರಚಿಸಿ ಸಮಕಾಲೀನ 'ಪವಾಡ ಪುರುಷ'ರಿಗೆ ಸವಾಲೊಡ್ಡಿದರು. ಪವಾಡಗಳನ್ನು ಸಾರ್ವಜನಿಕ ವೇದಿಕೆಯಿಂದ ಪ್ರದರ್ಶನ ಮಾಡುವಂತೆ ಪುಟ್ಟಪರ್ತಿಯ ಸತ್ಯಸಾಯಿಬಾಬಾರಿಗೆ ನೀಡಿದ ಸವಾಲನ್ನು ಅವರು ಸ್ವೀಕರಿಸಲಿಲ್ಲ. ಶಿವಬಾಲಯೋಗಿ ಮಹಾರಾಜ್ ಮತ್ತು ಪಾಂಡವಪುರದ ಸಾಯಿಕೃಷ್ಣ ಮುಂತಾದ ದೇವಮಾನವರ ಸತ್ಯವನ್ನು ಬಯಲಿಗೆಳೆದರು. ಕರ್ನಾಟಕದಲ್ಲಿ ಬಾನಾಮತಿ ಪ್ರಯೋಗದ ದೂರುಗಳು ಕೇಳಿಬಂದಾಗ ಅದರ ಶೋಧನೆಗೆ ನಿಯಮಿತವಾಗಿದ್ದ ಶಾಸಕೀಯ ಸಮಿತಿಯ ಅಧ್ಯಕ್ಷರೂ ಆಗಿ ಕಾರ್ಯನಿರ್ವಹಿಸಿದರು. ಹಾಗೆಂದು ನರಸಿಂಹಯ್ಯನವರು ಸಂಪ್ರದಾಯಗಳ ವಿರೋಧಿಯಾಗಿರಲಿಲ್ಲ. ೨೦೦೪ರಲ್ಲಿ ದಸರಾ ಮೆರವಣಿಗೆಯನ್ನು ಉದ್ಘಾಟಿಸುವ ಸಂದರ್ಭದಲ್ಲಿ "ನಾನು ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಗೌರವಿಸುತ್ತೇನೆ" ಎಂದು ಸಾರ್ವಜನಿಕವಾಗಿ ಹೇಳಿದ್ದರು.

ತಮ್ಮ ವೈಚಾರಿಕ ಲೇಖನಗಳನ್ನು ಸಂಗ್ರಹಿಸಿ "ತೆರೆದ ಮನ" ಎಂಬ ಪುಸ್ತಕವನ್ನು ಅವರಿ ೧೯೯೨ರಲ್ಲಿ ಪ್ರಕಟಿಸಿದರು. "ಹೋರಾಟದ ಹಾದಿ" ಅವರ ಆತ್ಮಕಥೆ.

ಅವರ ಸಾಧನೆಯನ್ನು ಗುರುತಿಸಿ ಅನೇಕ ಗೌರವಗಳು ಅವರಿಗೆ ಲಭಿಸಿವೆ. ಅವುಗಳಲ್ಲಿ ಕೆಲವು: ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ತಾಮ್ರಪತ್ರ, ವಿಶಿಷ್ಟ ಸೇವೆಗಾಗಿ ಕರ್ನಾಟಕ ರಾಜ್ಯ ಪ್ರಶಸ್ತಿ, 1984ರಲ್ಲಿ ಭಾರತ ಸರ್ಕಾರದಿಂದ ಪದ್ಮಭೂಷಣ ಪ್ರಶಸ್ತಿ, ಕಲಬುರ್ಗಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ವಿಜ್ಞಾನ ಕ್ಷೇತ್ರದ ಸಾಧನೆಗಾಗಿ ಸರ್.ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ, ಕರ್ನಾಟಕ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ ಮತ್ತು ಬಸವ ಪುರಸ್ಕಾರ, ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜ ಪುರಸ್ಕಾರ, ಕರ್ನಾಟಕ ರಾಜ್ಯ ನಾಟಕ ಅಕಾಡೆಮಿಯ ಫೆಲೋಶಿಪ್, ಕರ್ನಾಟಕ ರಾಜ್ಯ ವಿಧಾನ ಪರಿಷತ್‌ನಲ್ಲಿ ಶಿಕ್ಷಣ ಮತ್ತು ವಿಜ್ಞಾನವನ್ನು ಕ್ಷೇತ್ರದಿಂದ ನಾಮಕರಣಗೊಂಡ ಸದಸ್ಯರು. ಕರ್ನಾಟಕ ಸಂಗೀತದಲ್ಲಿ ಅಭಿರುಚಿ ಹೊಂದಿದ್ದ ಎಚ್ಚೆನ್ ಅವರ ಸಂಸ್ಮರಣೆಯಲ್ಲಿ ಪ್ರಸಿದ್ಧ ಸಂಗೀತಗಾರ ಶ್ರೀ ಆರ್ ಕೆ ಪದ್ಮನಾಭ ಅವರು ಒಂದು ಸಾವಿರ ಸಂಗೀತಗಾರರನ್ನು ಸೇರಿಸಿ ಗೋಷ್ಠಿ ನಡೆಸಿದ್ದುದು ಕಲಾಪ್ರಪಂಚವು ಅವರಿಗೆ ಸಲ್ಲಿಸಿದ ಗೌರವ.

ಅವಿವಾಹಿತರಾಗಿಯೇ ಬದುಕಿದ ಎಚ್ಚೆನ್ ೩೧/೦೧/೨೦೦೫ ರಂದು ನಿಧನರಾದಾಗ ಅವರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಮರ್ಯಾದೆಗಳೊಂದಿಗೆ ಹೊಸೂರಿನ ಅವರ ಜನ್ಮಸ್ಥಳದಲ್ಲಿಯೇ ನೆರವೇರಿಸಲಾಯಿತು. ತಮ್ಮ ಗಳಿಕೆಯ ಹಣವನ್ನೆಲ್ಲ ಶಿಕ್ಷಣ ಸಂಸ್ಥೆಗಳಿಗೆ ದಾನ ಮಾಡಿದ ಅವರು ತಮ್ಮ ಅಂತ್ಯಕ್ರಿಯೆಗಾಗಿ ೨೦೦೦ ರೂಪಾಯಿಗಳನ್ನು ಮೀಸಲಿರಿಸಿ ಉಯಿಲು ಬರೆದಿಟ್ಟಿದ್ದ ಪ್ರಖರ ಸ್ವಾಭಿಮಾನಿ.

**-ಕೆ. ಜನಾರ್ದನ ತುಂಗ**

# ಅದಮ್ಯ ಚೇತನ ತಿಂಗಳ ವರದಿ

**(15 ಮಾರ್ಚ್ 2023 ರಿಂದ 15 ಏಪ್ರಿಲ್ 2023)**

**ಎ-ಚಾಟ್ ನಲ್ಲಿ ಕನಕ ಜಾನಕಿ ಏಕವ್ಯಕ್ತಿ ತಾಳಮದ್ದಲೆ-** ಅನಂತಕುಮಾರ್ ಪ್ರತಿಷ್ಠಾನ ಸಾಂಸ್ಕೃತಿಕ ಕೇಂದ್ರದ ಆಶ್ರಯದಲ್ಲಿ ಈ ತಿಂಗಳ ಎ-ಚಾಟ್ ಸಾಂಸ್ಕೃತಿಕ ಕಾರ್ಯಕ್ರಮವು ಕೆಂಪೇಗೌಡನಗರದ ಉದಯಭಾನು ಕಲಾಸಂಘದಲ್ಲಿ ಜರುಗಿತು. ಶ್ರೀ ದಿವಾಕರ ಹೆಗಡೆ ಅವರು ರಾಮಾಯಣವನ್ನು ಆಧರಿಸಿದ "ಕನಕ ಜಾನಕಿ" - ಏಕ ವ್ಯಕ್ತಿ ತಾಳಮದ್ದಲೆ ನಡೆಸಿಕೊಟ್ಟರು. ಇವರ ಜೊತೆಗೆ ಭಾಗವತರಾಗಿ ಶ್ರೀ ಅನಂತ ಪದ್ಮನಾಭ ಪಾಟಕ್, ಮದ್ದಲೆ ವಾದಕರಾಗಿ ಶ್ರೀ ರಾಜೇಶ್ ಆಚಾರ್ಯ ಇದ್ದರು. ಕಾರ್ಯಕ್ರಮದಲ್ಲಿ ವಿಶ್ರಾಂತ ನ್ಯಾಯಮೂರ್ತಿ, ಎನ್ ಕುಮಾರ್, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಸೇರಿದಂತೆ ಅಧಿಕ ಸಂಖ್ಯೆಯಲ್ಲಿ ಪ್ರೇಕ್ಷಕರು ಭಾಗವಹಿಸಿದ್ದರು.

**ದೇಗುಲ ದರ್ಶನ ಮಾಲಿಕೆ-** ಪ್ರತಿತಿಂಗಳ 3ನೇ ಶುಕ್ರವಾರ ಪ್ರಸಾರವಾಗುವ ದೇಗುಲ ದರ್ಶನ ಮಾಲಿಕೆಯ ಈ ತಿಂಗಳ ಕಾರ್ಯಕ್ರಮದಲ್ಲಿ, ಬೆಂಗಳೂರು ನಗರದ ಹಲವಾರು ಪುರಾತನ ದೇವಾಲಯಗಳನ್ನು ಪರಿಚಯಿಸಲಾಯಿತು.

**ಶ್ರದ್ಧೆಯ ಶಿಲ್ಪ-** ಅದಮ್ಯ ಚೇತನದ ಪ್ರಾಯೋಜಿಸುವ ಶ್ರದ್ಧೆಯ ಶಿಲ್ಪ ಬಾನುಲಿ ಕಾರ್ಯಕ್ರಮ ಸರಣಿಯಲ್ಲಿ ಪ್ರತಿ ಮಂಗಳವಾರ ಮುಂಜಾನೆ 6.35ಕ್ಕೆ ಮತ್ತು ಸಂಜೆ 6.10ಕ್ಕೆ ಮೈಸೂರು ಸೀಮೆಯ ಪುರಾತನ ದೇವಾಲಯಗಳನ್ನು ಪರಿಚಯಿಸಲಾಗುತ್ತಿದೆ.

**ಹಸಿರು ಭಾನುವಾರ-** ಬೆಂಗಳೂರು ನಗರದ ಹಸಿರು ವಲಯವನ್ನು ಅಭಿವೃದ್ಧಿಪಡಿಸುವ ಮಹದುದ್ದೇಶದಿಂದ ಶ್ರೀ ಅನಂತಕುಮಾರರು ಪ್ರಾರಂಭಿಸಿದ ಹಸಿರು ಭಾನುವಾರ ಕಾರ್ಯಕ್ರಮವನ್ನು ಹಲವು ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಅದರಂತೆ 378 ನೇ ಹಸಿರು ಭಾನುವಾರ ಕಾರ್ಯಕ್ರಮವನ್ನು ಎಲೆಕ್ಟ್ರಾನಿಕ್ ಸಿಟಿ ಮಾರಗೊಂಡನ ಹಳ್ಳಿ ಕೆರೆ ದಿಬ್ಬದ ಬಳಿ ಹಮ್ಮಿಕೊಳ್ಳಲಾಯಿತು. 379 ಮತ್ತು 380ನೇ ಗಿಡನೆಡುವ ಕಾರ್ಯಕ್ರಮಗಳು ಬೆಂಗಳೂರು ವಿಶ್ವವಿದ್ಯಾಲಯದ ಎನ್ ಜಿ ಇ ಎಫ್ ಆವರಣದಲ್ಲಿ ಜರುಗಿದವು. 381 ನೇ ಕಾರ್ಯಕ್ರಮದ ಅಂಗವಾಗಿ ಜೆಪಿ ನಗರದ ಸುತ್ತಮುತ್ತ ಗಿಡ ನೆಡುವ ಚಟುವಟಿಕೆ ನಡೆಯಿತು. ಈ ತಿಂಗಳು ನಗರದ ವಿವಿಧೆಡೆ ಗಿಡಗಳನ್ನು ನೆಡುವುದಲ್ಲದೆ ಈಗಾಗಲೇ ನೆಟ್ಟ ಸಸ್ಯಗಳಿಗೆ ನೀರುಣಿಸುವ ಕೆಲಸವನ್ನು ಮುಂದುವರಿಸಲಾಗಿದೆ.

**ನಿತ್ಯ ಅನ್ನದಾನ-** ಅದಮ್ಯ ಚೇತನದ ವತಿಯಿಂದ ಜಯನಗರ, ನಗರ್ತಪೇಟೆ, ಗವಿಪುರಂ, ಹಲಸೂರು ಮತ್ತು ಅನಂತ ಪ್ರೇರಣಾ ಕೇಂದ್ರದಲ್ಲಿ ನಿತ್ಯ ಅನ್ನದಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದುವರೆಗೂ 3,08,420 ಜನರು ಮಧ್ಯಾಹ್ನದ ಊಟದ ಸೌಲಭ್ಯವನ್ನು ಪಡೆದುಕೊಂಡಿರುತ್ತಾರೆ.

**ಶ್ರೀಚೇತನ ಸಭೆ-** ಎಂದಿನಂತೆ ಶ್ರೀಚೇತನ ಸಭೆಯನ್ನು ಆನ್ ಲೈನ್ ಮೂಲಕ ನಡೆಸಲಾಗುತ್ತಿದೆ. ಪ್ರತಿ ಮಂಗಳವಾರ ಮಧ್ಯಾಹ್ನ 12ಕ್ಕೆ ಪ್ರಾರ್ಥನೆಯಿಂದ ಪ್ರಾರಂಭವಾಗಿ 1.30ವರೆಗೆ ನಡೆದ ಸಭೆಗಳಲ್ಲಿ ಪ್ರಾರ್ಥನೆ, ಭಗವದ್ಗೀತೆ ಶ್ಲೋಕ ಪಠಣ, ಕವಿನಮನ, ಗಿಡ-ಮರಗಳ ಪರಿಚಯ, ಆರೋಗ್ಯ, ಅಡುಗೆ ಸೇರಿದಂತೆ ಮುಂತಾದ ಕಾರ್ಯಕ್ರಮಗಳು ನಡೆದುಕೊಂಡು ಬರುತ್ತಿವೆ.

**ಭಗವದ್ಗೀತೆ-** ಪ್ರತಿ ಗುರುವಾರ ಸಂಜೆ 4 ಗಂಟೆಯಿಂದ 5 ಗಂಟೆಯವರೆಗೆ ಭಗವದ್ಗೀತೆಯ ಶ್ಲೋಕ ಪಠಣವನ್ನು ಅದಮ್ಯ ಚೇತನದ ಆವರಣದಲ್ಲಿ ನಡೆಸಲಾಗುತ್ತಿದೆ.

**ಹುಬ್ಬಳ್ಳಿಯಲ್ಲಿ ಬೇಸಿಗೆ ಶಿಬಿರ-** ಹುಬ್ಬಳ್ಳಿಯ ವಿಜಯನಗರದ ಅನಂತ ಪ್ರೇರಣಾ ಕೇಂದ್ರದಲ್ಲಿ ನಡೆದ ಬೇಸಿಗೆ ಶಿಬಿರದಲ್ಲಿ 60ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಅನಂತಕುಮಾರರ ಫೋಟೋ ಗ್ಯಾಲರಿ ವೀಕ್ಷಣೆ ಮಾಡಿ, ವ್ಯಕ್ತಿತ್ವ ವಿಕಸನ ಕಾರ್ಯಾಗಾರದಲ್ಲಿ ಭಾಗವಹಿಸಿದರು

**ಜೀವಮಾನದ ಸಾಧನೆಗಾಗಿ ಪ್ರಶಸ್ತಿ-** ಫೆಡರೇಶನ್ ಆಫ್ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್ ಆಶ್ರಯದಲ್ಲಿ ದಿನಾಂಕ ೯, ಮಾರ್ಚ್ ೨೦೨೩ ರಂದು ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರರ ಜೀವಮಾನದ ಸಾಧನೆಯನ್ನು ಗುರುತಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ, ಶ್ರೀ ಗೋಪಾಲ ರೆಡ್ಡಿ, ಮಹಿಳಾ ಉದ್ಯಮಿಗಳ ಸಮಿತಿಯ ಅಧ್ಯಕ್ಷೆ ಶ್ರೀಮತಿ ಉಮಾ ರೆಡ್ಡಿ, ಇಸ್ರೋ ಮಾಜಿ ನಿರ್ದೇಶಕಿ ಡಾ. ಟಿ ಕೆ ಅನುರಾಧಾ ಮತ್ತಿತರರು ಭಾಗವಹಿಸಿದ್ದರು

## ಅಭಿಪ್ರಾಯ ದೇವಾಲಯಗಳ ಮಾಹಿತಿಯ ಕಣಜ

ಕರ್ನಾಟಕದಲ್ಲಿ ಕದಂಬರಿಂದ ಪಾಳೇಗಾರರ ಕಾಲದ ವರೆಗೂ ನಿರಂತರವಾಗಿ ದೇವಾಲಯಗಳು ನಿರ್ಮಾಣಗೊಂಡಿವೆ. ಅವೆಲ್ಲವೂ ಕನ್ನಡಿಗರ ವಾಸ್ತುವೈಭವಕ್ಕೆ, ಕಲಾಕುಸುರಿಗೆ ಸಾಕ್ಷಿಯಾಗಿವೆ. ಕೆಲವು ದೇವಾಲಯಗಳನ್ನು ಹೊರತುಪಡಿಸಿದರೆ ಬಹುತೇಕ ದೇವಾಲಯಗಳು ಮಾಹಿತಿಗಳ ಕೊರತೆಯಿಂದ ಜನರಿಗೆ ಅಪರಿಚಿತವಾಗಿಯೇ ಉಳಿದಿವೆ. ಈ ನಿಟ್ಟಿನಲ್ಲಿ ನಾಡಿನ ದೇವಾಲಯಗಳ ಪರಿಚಯವನ್ನು ಅನಂತಕುಮಾರ್ ಪ್ರತಿಷ್ಠಾನವು 'ದೇಗುಲ ದರ್ಶನ' ಮಾಲಿಕೆಯಲ್ಲಿ ಯೂಟ್ಯೂಬ್ ಮೂಲಕ ಮಾಡುತ್ತಿದೆ. ಹಿರಿಯ ಸಾಹಿತಿ ಟಿ ಎಸ್ ಗೋಪಾಲ್ ಅವರ ಮಾರ್ಗದರ್ಶನದಲ್ಲಿ ಮೂಡಿಬರುತ್ತಿರುವ ಈ ಮಾಲಿಕೆಯಲ್ಲಿ ದೇವಾಲಯಗಳ ಕಿರುಪರಿಚಯ, ಮಾರ್ಗಸೂಚಿ ಮತ್ತು ಸಂಪರ್ಕಗಳ ಮಾಹಿತಿ ನೀಡುತ್ತಿದ್ದು ಕೆಂಗೇರಿ ಚಕ್ರಪಾಣಿಯವರು ತಮ್ಮ ಅನುಭವ ಹಾಗೂ ಅಧ್ಯಯನದ ಹಿನ್ನೆಲೆಯಲ್ಲಿ ದೇವಾಲಯಗಳ ಮಾಹಿತಿಗಳ ಕಣಜವನ್ನೇ ನೀಡುತ್ತಿದ್ದಾರೆ. ಶಿಲ್ಪಲೋಕದ ರಸಾನುಭವವನ್ನು ನೀಡುವ ಇಲ್ಲಿನ ಸಂಚಿಕೆಗಳು ಪ್ರವಾಸಿಗರಿಗಷ್ಟೇ ಅಲ್ಲದೆ ಅಧ್ಯಯನಕ್ಕೂ ಉಪಯುಕ್ತವಾಗಿವೆ. ಈ ಪರಿಚಯ ಮಾಲಿಕೆ ನೂರಾರು ಕಂತುಗಳಲ್ಲಿ ಮುಂದುವರಿಯಲಿ.

- **ಶ್ರೀನಿವಾಸಮೂರ್ತಿ ಎನ್ ಎಸ್**, ಬರಹಗಾರರು, ಕರ್ನಾಟಕ ಬ್ಯಾಂಕ್ ಮುಖ್ಯ ವ್ಯವಸ್ಥಾಪಕರು.

**ಶ್ರವಣಬೆಳಗೊಳದ ಜೈನ ಮಠದ ಮುಖ್ಯಸ್ಥರೂ ಜೈನಧರ್ಮದ ಹಿರಿಯ ಸಂತರೂ ಆಗಿದ್ದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು 23 ಮಾರ್ಚ್ 2023ರಂದು ಮಠದ ಆವರಣದಲ್ಲಿ ನಿಧನರಾದರು. ಪೂಜ್ಯರಿಗೆ ಅದಮ್ಯಚೇತನ ಹಾಗೂ ಅನಂತಕುಮಾರ ಪ್ರತಿಷ್ಠಾನದ ಪರವಾಗಿ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇವೆ.**



## ನಿತ್ಯ ಅನ್ನದಾನ- ತಿಂಗಳ ಅಂಕಿಅಂಶ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಮಾರ್ಚ್ ತಿಂಗಳಲ್ಲಿ ವಿತರಣೆಯಾದ ಊಟದ ಅಂದಾಜು ಸಂಖ್ಯೆ | ಇಂದಿನ ವರೆಗೆ ವಿತರಣೆಯಾದ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ 2.00 ರಿಂದ 3.00 | 4650 | 1,27,950 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ 12.30 ರಿಂದ 1.30 | 3100 | 83,000 |
| 3 | ನಗರ್ತಪೇಟೆ ಮುಖ್ಯರಸ್ತೆಯ ನಗರೇಶ್ವರ ದೇವಸ್ಥಾನ 12.30 ರಿಂದ 1.30 | 3100 | 72,900 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು ಕೆರೆ ಪಕ್ಕ ಬೆಂಗಳೂರು 12.30 ರಿಂದ 1.30 | 4650 | 11,250 |
| 5 | ಅನಂತ ಪ್ರೇರಣಾ ಕೇಂದ್ರ ಸೌಂತ್ ಎಂಡ್ ವೃತ್ತ 12.45 ರಿಂದ 2.00 (ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ) | 1000 | 13,320 |
| | | ಒಟ್ಟು ಅಂದಾಜು 16,500 | ಒಟ್ಟು ಅಂದಾಜು 3,08,420 |

## ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜನೆ ಮಾಡಲಾಗಿದ್ದ ವಿಕಲಚೇತನರ ಚಿತ್ರಕಲಾ ಪ್ರದರ್ಶನಕ್ಕೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಭೇಟಿ ನೀಡಿ, ಚಿತ್ರಕಲಾವಿದರನ್ನು ಅಭಿನಂದಿಸಿದರು.



ಬಿ.ಎಂ.ಎಸ್ ಕಾಲೇಜಿನ ಇಂಟರ್ನ್‌ಶಿಪ್ ವಿದ್ಯಾರ್ಥಿಗಳು ಅನಂತ ಪ್ರೇರಣಾ ಕೇಂದ್ರವನ್ನು ವೀಕ್ಷಿಸಿ, ಶ್ರೀಮತಿ ತೇಜಸ್ವಿನಿ ಅನಂತಕುಮಾರರೊಂದಿಗೆ ಸಂವಾದದಲ್ಲಿ ಪಾಲ್ಗೊಂಡಿದ್ದರು.



ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ (FKCCI) ಸಂಸ್ಥೆಯ ಕಾರ್ಯಕ್ರಮವೊಂದರಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರನ್ನು ಜೀವಮಾನದ ಸಾಧನೆಗಾಗಿ ಸನ್ಮಾನಿಸಿದ ಸಂದರ್ಭ.




ಶಿವಮೊಗ್ಗದಲ್ಲಿ ಬಿಜೆಪಿಯ ಜಿಲ್ಲಾ ಚುನಾವಣಾ ನಿರ್ವಹಣಾ ಸಮಿತಿ ವತಿಯಿಂದ ಜಿಲ್ಲಾ ಮಟ್ಟದ ಕಾರ್ಯಾಗಾರವನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ಕುಮಾರ್ ಬಂಗಾರಪ್ಪ, ಭಾನುಪ್ರಕಾಶ್, ಗಿರೀಶ್ ಪಟೇಲ್, ಮೇಘರಾಜ, ಮೋನಪ್ಪ ಭಂಡಾರಿ, ಅಶೋಕ್ ನಾಯಕ್, ಡಿ. ಎಸ್. ಅರುಣ್ ಮೊದಲಾದವರು ಭಾಗವಹಿಸಿದ್ದರು.



Lions International-District 317-F ಪ್ರಾದೇಶಿಕ ಸಭೆಯ ಕಾರ್ಯಕ್ರಮದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರರನ್ನು ಸನ್ಮಾನಿಸಿದ ಸಂದರ್ಭದಲ್ಲಿ ಜ್ಞಾನಪೀಠ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ಮೊದಲಾದವರು ಉಪಸ್ಥಿತರಿದ್ದರು.



378ನೇ ಹಸಿರು ಭಾನುವಾರ ಕಾರ್ಯಕ್ರಮದ ಅಂಗವಾಗಿ ಎಲೆಕ್ಟ್ರಾನಿಕ್ ಸಿಟಿಯ ಮಾರಗೊಂಡನ ಹಳ್ಳಿ ಕೆರೆದಿಬ್ಬದ ಪರಿಸರದಲ್ಲಿ ಸುಮಾರು 64 ಗಿಡಗಳನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರರ ನೇತೃತ್ವದಲ್ಲಿ ನೆಡಲಾಯಿತು.



ಇಸ್ರೇಲ್ ಕಾನ್ಸುಲ್ ಜನರಲ್ ಟಿಮ್ಮಿ ಬೆನ್ ಹೈಮ್ ಅವರು ಅದಮ್ಯ ಚೇತನದ ಅಡುಗೆ ಮನೆಯನ್ನು ವೀಕ್ಷಿಸಿ, ಶೂನ್ಯ ತ್ಯಾಜ್ಯ ಚಟುವಟಿಕೆಗಳನ್ನು ಪ್ರಶಂಸಿಸಿದರು.






ಎ-ಚಾಟ್ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶ್ರೀ ದಿವಾಕರ ಹೆಗಡೆಯವರು ಏಕವ್ಯಕ್ತಿ ತಾಳಮದ್ದಲೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ಅನಂತ ಚಿತ್ರಸಂಪುಟ

ಅನಂತಕುಮಾರರಿಗೆ ಚುನಾವಣಾ ಪ್ರಚಾರಕಾರ್ಯವೆಂಬುದು ಬರಿಯ ಯಾಂತ್ರಿಕ ಚಟುವಟಿಕೆಯಾಗಿರಲಿಲ್ಲ. ಮತದಾರನ ಮನೆಯನ್ನೂ ಮನವನ್ನೂ ತಲುಪುವ ಆತ್ಮೀಯ ಸಂವಾದವಾಗಿತ್ತು. ಹೀಗಾಗಿ ಎಲ್ಲ ಮತದಾರರೂ ಅನಂತಕುಮಾರರನ್ನು ತಮ್ಮವರೆಂದೇ ಭಾವಿಸಿದ್ದುದರಲ್ಲಿ ಅತಿಶಯವಿಲ್ಲ.









